ಶ್ರೀ ಸಿದ್ದರಾಮಯ್ಯ : ಬರಗಾಲವಿದ್ದಾಗ ಚೈನಾಕ್ಕೆ ಹೊರಟು ಹೋಗಿದ್ದರಲ್ಲಾ ಆದ್ದರಿಂದ ಕೋಪ ಇದೆ ಅವರಿಗೆ!

1-30 PM

7. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ :

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷ ಅಧಿವೇಶನ ಕರೆದು ಮೂರು ದಿವಸ ಚರ್ಚೆ ಮಾಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದೆ. ಆ ಭರವಸೆ ಮೇರೆಗೆ ಈ ಅಧಿವೇಶನವನ್ನು ಕರೆಯಲಾಗಿದೆ. ಅದಕ್ಕೆ ಸಹಕಾರ ನೀಡಿದಂತಹ ಪ್ರತಿಪಕ್ಷದ ನಾಯಕರಿಗೆ, ಈ ಮನೆಯ ಎಲ್ಲಾ ಸದಸ್ಯರಿಗೆ, ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಬಹುಶಃ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದಂತಹ, ನಮ್ಮ ಕೃಷಿಕನ, ಕೃಷಿ ಕಾರ್ಮಿಕನ, ಸ್ವಾತಂತ್ರ್ಯಾ ನಂತರ ಇವತ್ತಿನ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವಂತಹ ಅವಕಾಶ ಇದಾಗಿದೆ. ನನ್ನ ಅಪೇಕ್ಷೆ ಇದ್ದಂತದ್ದು ಇಷ್ಟೇ. ಈ ನಾಡಿನ ರೈತರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ಬೇರೆ ಯಾವುದೇ ಚರ್ಚೆ ಆಗದೇ, ಇದಕ್ಕೆ ಆದ್ಯತೆಯನ್ನು ಕೊಟ್ಟು ಚರ್ಚೆ ಮಾಡಬೇಕೆಂದು Business Advisory Committeeನಲ್ಲಿ ನಿಮ್ಮ ಮುಂದೆ ಕಾಡಿ, ಬೇಡಿ, ಕಾಲು ಹಿಡಿಯುವುದೊಂದನ್ನು ಬಿಟ್ಟು, ಇನ್ನೆಲ್ಲ ಪ್ರಾರ್ಥನೆಯನ್ನು ಪ್ರತಿಪಕ್ಷದ ನಾಯಕರುಗಳಿಗೆ ಮಾಡಿದೆ. ಬರದ ಬಗ್ಗೆ, ಅತಿವೃಷ್ಟಿ ಬಗ್ಗೆ, ಇನ್ನೂ ಅನೇಕ ಕೃಷಿಕನ ಜ್ವಲಂತ ಸಮಸ್ಯೆಗಳ ಬಗ್ಗೆ ಮೂರು ದಿವಸ ಚರ್ಚಿಸಲು ಅವಕಾಶವಿದೆ. ಬರ ಬಂದಾಗ ನಾವು ಏನು ಮಾಡಬೇಕು? ಅತಿವೃಷ್ಟಿ ಬಂದಾಗ ಏನು ಮಾಡಬೇಕು? ಇದುವರೆಗೂ ಏನು ಮಾಡಿದ್ದೇವೆ? ಮುಂದೆ ಏನು ಮಾಡಬಹುದು? ಈ ಬಗ್ಗೆ ನಿಮ್ಮ ಸಲಹೆಗಳನ್ನು ಕೇಳುವುದಕ್ಕಾಗಿಯೇ ಈ ಅಧಿವೇಶನ ಕರೆಯಲಾಗಿದೆ. ರಾಜ್ಯ ಸರ್ಕಾರ ಏನು ಮಾಡಬಹುದು? ಕೇಂದ್ರ ಸರ್ಕಾರದಿಂದ ಯಾವ ರೀತಿ ನೆರವನ್ನು ಪಡೆಯಬಹುದು? ಎಂದು ಸಲಹೆ ನೀಡಿ. ಇವತ್ತು ನನಗೆ ಏನೂ ಕೂಡ ಮಾತನಾಡಲಿಕ್ಕೆ ಇಷ್ಟವಿಲ್ಲ. ನನ್ನ ಬುದ್ಧಿವಂತಿಕೆಯ ಪ್ರದರ್ಶನವನ್ನು ಮಾಡುವುದಕ್ಕೂ ನಾನು ಇಲ್ಲಿ ನಿಂತಿಲ್ಲ. ನಿಮ್ಮ ಸಲಹೆಗಳು ಬಂದ ಮೇಲೆ ನಾವು ಏನು ಮಾಡಿದ್ದೇವೆ? ಏನು ಮಾಡಬೇಕೆಂದಿದ್ದೇವೆ? ಮುಂದೆ ಏನು ಮಾಡಬಹುದು? ಎಂದು ಹೇಳುತ್ತೇವೆ. ರಾಜಕೀಯವನ್ನು ಬೆರೆಸದೇ ಇದರ ಬಗ್ಗೆ ಚರ್ಚೆಯಾಗಬೇಕು

ಎಂಬುದು ನನ್ನ ಅಪೇಕ್ಷೆಯಾಗಿದೆ. ನಾನು ಪ್ರತಿಪಕ್ಷದ ನಾಯಕರ ಜೊತೆಗೆ ಇದರ ಬಗ್ಗೆ ಮಾತನಾಡಿದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಸಭಾಪತಿಗಳು ಜೊತೆಗೆ ಚರ್ಚೆ ಮಾಡಿದ್ದೇನೆ. ಆಗ ನೀವು ಒಪ್ಪಿಗೆ ಏನು ಕೊಟ್ಟಿದ್ದೀರಿ ಎಂಬುದು ನಿಮಗೆ ಗೊತ್ತಿದೆ. ಕೊನೆಗೂ ಕಾಡಿ ಬೇಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತಹ ತಮಗೆ, ಪ್ರತಿಪಕ್ಷದ ನಾಯಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ರೈತರ ಮಗನಾಗಿ, ಜನರ ಆಶೀರ್ವಾದದಿಂದ ಇಲ್ಲಿಗೆ ನಾನು ಬಂದಿದ್ದೇನೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇನೆ. ಆ ದಿಕ್ಕಿನಲ್ಲಿ ಕಳೆದ 14 ತಿಂಗಳಿನಲ್ಲಿ ಹಣಕಾಸಿನ ಇತಿಮಿತಿಯಲ್ಲಿ ಏನೇನು ಮಾಡಲಿಕ್ಕೆ ಸಾಧ್ಯವಿದೆಯೋ, ಆ ಇತಿಮಿತಿಯಲ್ಲಿ ನಾಲ್ಕು ಹೆಜ್ಜೆ ಇಡುವಂತಹ ಪ್ರಯತ್ನ ಮಾಡಿದ್ದೇವೆ. ಇವತ್ತು ದೇಶದಲ್ಲಿ ಮೊದಲ ಬಾರಿಗೆ ಅನೇಕ ರೀತಿಯ ಚರ್ಚೆಗಳಾಗಿದೆ. ಆದರೂ ರಾಜ್ಯದ ವಿಧಾನ ಮಂಡಲವೊಂದರಲ್ಲಿ ವಿಶೇಷವಾಗಿ ಈ ಬಗ್ಗೆಯೇ ಮೂರು ದಿವಸ ಚರ್ಚೆಯಾಗಿ, ನಿಮ್ಮೆಲ್ಲರ ಸಲಹೆಯನ್ನು ಪಡೆಯುವುದಕ್ಕೆ ನಾನಿಲ್ಲ ನಿಂತಿದ್ದೇನೆ. ಅತ್ಯಂತ ವಿನಯದಿಂದ ಮತ್ತೊಮ್ಮೆ ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನೀವು ಏನು ಬೇಕೋ, ಎಲ್ಲವನ್ನೂ ಚರ್ಚೆ ಮಾಡಿ, ಈ ಮೂರು ದಿವಸ ಆದಮೇಲೆ ಇನ್ನೂ ಮೂರು ದಿವಸ ನೀವು ಕುಳಿತುಕೊಳ್ಳಬೇಕು ಎನ್ನುವುದಾದರೆ, ಆ ರೀತಿ ಕುಳಿತುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ನಾವು, ನೀವು ಎಲ್ಲಾ ಜನಪ್ರತಿನಿಧಿಗಳು ಇಲ್ಲಿದ್ದೇವೆ. ರಾಜಕಾರಣ ಚುನಾವಣೆ ಸಂದರ್ಭದಲ್ಲಿ ಮಾಡೋಣ. ಈ ಸಂದರ್ಭದಲ್ಲಿ ರಾಜಕೀಯವನ್ನು ಬದಿಗೊತ್ತಿ ವಾಸ್ತವಿಕ ಸ್ಥಿತಿಯನ್ನು ಅರ್ಥ ಮಾಡಿಕೊಂಡು, ಇದಕ್ಕೆ ಪರಿಹಾರ ಹುಡುಕುವುದರಲ್ಲಿ ಸ್ವಲ್ಪ ಯಶಸ್ವಿಯಾಗಿ ಮುಂದೆ ಹೋಗಬೇಕು ಎನ್ನುವುದು ನನ್ನ ಅಪೇಕ್ಷೆಯಾಗಿದೆ. ಹಳ್ಳಿ ಉಳಿಸುವಂತ 'ಗ್ರಾಮ ಮುಖಿ' ಯೋಜನೆಗೆ ಇಂದಿನಿಂದ ಚಾಲನೆ ನೀಡುತ್ತಿದ್ದೇವೆ. ಇಂದು 9ನೇ ತಾರೀಖು, 9ನೇ ತಿಂಗಳು, 2009ನೇ ಇಸವಿ. ಈ '9' ಎನ್ನುವಂತಹ ಸಂಖ್ಯೆ, ಈ ಕನಸುಗಳನ್ನು ವಿಸ್ತಾರ ಮಾಡಿ, ನನಸು ಮಾಡುವುದಕ್ಕೆ ಯೋಗ್ಯವಾದಂತಹ ಸಂಖ್ಯೆ ಎಂದು ಶಾಸ್ತ್ರಗಳು ಹೇಳುತ್ತವೆಂದು ಕೆಲವು ಹಿರಿಯರು ನನಗೆ ಹೇಳಿದರು. ಮೂರು '9'ರ ಈ ಸಂಗಮ ಅತ್ಯಂತ ಶುಭವಾಗಲಿ. ಇಂದು ಬುಧವಾರ, ಒಬ್ಬ ರೈತನ ಮಗನಾಗಿ ಇದು ಭೂಮಿಗೆ ಸಂಬಂಧಿಸಿದ ವಾರ ಎಂದು ನನಗೆ ತಿಳಿಸಿದೆ, ನಿಮಗೂ ಸಹ ಇದು ಗೊತ್ತಿದೆ. ಇವತ್ತು ಕೊನೆಗೂ ಈ ಚರ್ಚೆ ಮಾಡಲು ಅವಕಾಶ ಕೊಟ್ಟಂತಹ

ತಮಗೆ ವಂದಿಸುತ್ತೇನೆ. ಈ ಸರ್ಕಾರ ಈ ರೀತಿ ಒಂದು ಅಧಿವೇಶನ ಕರೆದು, ನಮ್ಮ ಸಮಾಜದ ಮತ್ತು ನಾಡಿನ ಅತ್ಯಂತ ಮಹತ್ವದ ವಿಷಯಗಳಾದಂತಹ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾಡುತ್ತಿದೆ. ಇದು ನಮ್ಮ ಸರ್ಕಾರ ರೈತರ ಪರವಾಗಿ ಇರುವುದಕ್ಕೆ ಮತ್ತು ಗ್ರಾಮೀಣ ಜನರ ಅಭಿವೃದ್ಧಿ ಬಗ್ಗೆ ನೀಡಿರುವ ಆದ್ಯತೆ ಮತ್ತು ತಳೆದಿರುವ ಬದ್ಧತೆಗೆ ನಿದರ್ಶನವಾಗಿದೆ. ಮೂರು ದಿವಸ ಆದರೂ ಅರ್ಥಪೂರ್ಣ ಚರ್ಚೆಯಾಗಬೇಕು. ಹಿಂದೆ ಆದದ್ದನ್ನು ಮರೆತು, ಮುಂದಿನ ಭವಿಷ್ಯದ ಬಗ್ಗೆ ಗಂಭೀರವಾಗಿ ಚರ್ಚೆ ಮಾಡೋಣ. ನಿಜ ಹೇಳಬೇಕೆಂದರೆ ಕಳೆದ 14 ತಿಂಗಳಲ್ಲಿ ಯಾವುದೇ ಸಂದರ್ಭದಲ್ಲಿ, ವಿವಿಧ ಇಲಾಖೆಗಳ ಬೇಡಿಕೆ ಬಗ್ಗೆ ಅದರದೇ ಆದಂತಹ ವಿಶೇಷ ಕಾರಣಕ್ಕೆ ವಿಶೇಷವಾದಂತಹ ಚರ್ಚೆಯಾಗಿಲ್ಲ. ನಾನು ಈ ಸದನದ ನಾಯಕನಾಗಿ ಇಲ್ಲಿ ಕುಳಿತು ಏತಕ್ಕಾಗಿ ನೀವು ಸಹಕಾರ ಕೊಡುತ್ತಿಲ್ಲ? ಏಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಸವಿಸ್ತಾರವಾದ ಚರ್ಚೆಗಳಾಗಿಲ್ಲ. ಅದು ನಿಮ್ಮ ತಪ್ಪೋ, ನಮ್ಮ ತಪ್ಪೋ ಎಂಬುದನ್ನು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಏನೇ ಇರಬಹುದು, ಅದನ್ನೆಲ್ಲಾ ಮರೆತು ಇನ್ನು ಮುಂದೆ ಏನು ಮಾಡಬೇಕು? ಎನ್ನುವುದರ ಬಗ್ಗೆ ಯೋಚನೆ ಮಾಡೋಣ. ಸನ್ಮಾನ್ಯ ಸಭಾಧ್ಯಕ್ಷರೆ, ಗಣರಾಜ್ಯದ ಈ 60 ವರ್ಷಗಳಲ್ಲಿ ಕೃಷಿ ಮತ್ತು ಗ್ರಾಮೀಣಾ ಭಿವೃದ್ಧಿ ಬಗ್ಗೆ ಬಹಳಷ್ಟು ಚಿಂತನೆ ನಡೆದಿದೆ.

ಹಸಿರು ಕ್ರಾಂತಿ, Green Revolution, ರೈತರ ಪರಿಶ್ರಮ ಮತ್ತು ರೈತರ ಬೆವರಿನ ಕಾರಣಕ್ಕಾಗಿ ಆಹಾರ ಉತ್ಪಾದನೆಯಲ್ಲಿ ನಮ್ಮ ರಾಷ್ಟ್ರ ಸ್ವಾವಲಂಬಿ ರಾಷ್ಟ್ರವಾಗಲು ಸಾಧ್ಯವಾಯಿತು. ನನಗೆ ಕಣ್ಣೀರು, ನೋವು ತರುತ್ತಿರುವಂತಹದ್ದು, ಆಹಾರದಲ್ಲಿ ದೇಶವನ್ನೇ ಸ್ವಾವಲಂಬಿ ಮಾಡಿದ ಆ ರೈತ, ಆ ಕೃಷಿಕ ಮಾತ್ರ ದಿನದಿನಕ್ಕೆ ಕೃಶವಾಗಿ ಹೋಗುತ್ತಿದ್ದಾನೆ, ಬೇಡುವ ಸ್ಥಿತಿಯಲ್ಲಿದ್ದಾನೆ, ಕೈಚಾಚಿ ಕೊಡಬೇಕಾದವನ್ನು, ಬೇಡುವಂತಹ ಒಂದು ದುಸ್ಥಿತಿಗೆ ಬಂದು ತಲುಪಿದ್ದಾನೆ. 100ಕ್ಕೆ 70ರಷ್ಟು ಜನ ಇವತ್ತು ನಮ್ಮ ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಅವಲಂಬಿತನಾಗಿದ್ದಾರೆ. ಸಿದ್ದರಾಮಯ್ಯನವರು ಬರಗಾಲದ ಬಗ್ಗೆ ಪ್ರಸ್ತಾಪ ಮಾಡಿದರು. ಅವನ ಸಮಸ್ಯೆ, ಅವನ ಅಪೇಕ್ಷೆಯನ್ನು ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ನಾವು ಸ್ವಾವಲಂಬಿಗಳಾಗಿದ್ದ ಕಾರಣಕ್ಕಾಗಿ, ಅವನು ನಮ್ಮನ್ನು ಸ್ವಾವಲಂಬಿಯಾಗಿ ನೋಡುವುದಕ್ಕೆ, ಎರಡು ಹೊತ್ತು ಊಟ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಟ್ಟ ರೈತನ ನೆರವಿಗೆ ನಾವು ಆಗದಿರುವಂತಹ ಒಂದು ವಿಚಿತ್ರವಾದ

ಸನ್ನಿವೇಶಕ್ಕೆ ನಾವು ಬಂದು ತಲುಪಿದ್ದೇವೆ. ಇವತ್ತು ಸಹ, ನಮಗೆ ನಿಮಗೆ ಗೊತ್ತಿರುವ ಹಾಗೆ 70% ಕೃಷಿ ಭೂಮಿ ಮಳೆ ಆಧಾರಿತವಾಗಿದೆ. ರೈತ ನಿಸರ್ಗದ ಮೇಲೆ ಅವಲಂಬಿತನಾಗಿದ್ದಾನೆ. ಸಕಾಲಕ್ಕೆ ರಸಗೊಬ್ಬರ ಸಿಗಬಹುದು, ಸಿಗದಿರಬಹುದು, ಹಣಕಾಸಿನ ನೆರವು ಸಕಾಲಕ್ಕೆ ಸಿಗಬಹುದು, ಸಿಗದಿರಬಹುದು, ಮಳೆ ಚೆನ್ನಾಗಿ ಬಂತು, ಒಳ್ಳೆಯ ಬೆಳೆಯಾಯಿತು, ಅವನ ಉತ್ಪನ್ನಕ್ಕೆ ಬೆಲೆ ನಿಗದಿ ಮಾಡುವಂತಹ ಅಧಿಕಾರ ಅವನಿಗೆ ಇಲ್ಲ. ಒಳ್ಳೆಯ ಬೆಲೆ ಸಿಗುವಂತಹ ವಿಶ್ವಾಸ ಅವನಿಗಿಲ್ಲ. ಆದುದರಿಂದ ಈ ಎಲ್ಲಾ ಕಾರಣಗಳಿಂದ ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳ ನಂತರವೂ ಸಹ ಕೃಷಿಕ, ಕೃಷಿ ಕಾರ್ಮಿಕ ಬಹಳಷ್ಟು ಜನರು ಬಡತನದ ರೇಖೆಯ ಕೆಳಗಿರುವುದನ್ನು ನಮ್ಮ ಅಂಕಿ ಅಂಶಗಳು ಹೇಳುತ್ತವೆ. ಹಾಗಾದರೆ ನಾವೇನು ಮಾಡಲಿಲ್ಲವೇ? ಕಳೆದ ಮೂರು ದಶಕಗಳಲ್ಲಿ ಬಡತನ ನಿರ್ಮೂಲನೆ, ಗ್ರಾಮೀಣಾಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಮಾಡಿದ್ದೇವೆ. 3 ದಶಕಗಳಲ್ಲಿ ಸಾಕಷ್ಟು ಪ್ರಯೋಗಗಳನ್ನು ನಾವು ಮಾಡಿದ್ದೇವೆ, ಯೋಜನೆಗಳು ಜಾರಿಗೆ ಬಂದಿದ್ದಾವೆ. IRDP – Integrated Rural Development Programme, TRYSM – Training of Rural Yoth for Self Employment, DWACRA – Development of Women and Children in Rural Area, NREP – National Rural Employment Programme, RLEGP – Rural Employment Guarantee Programme, ಕೂಲಿಗಾಗಿ ಕಾಳು – Food for Work ಯೋಜನೆಗಳನ್ನು ನಾವು ಆರಂಭ ಮಾಡಿದ್ದೇವೆ. ಪ್ರಾದೇಶಿಕ ಅಭಿವೃದ್ಧಿಗಾಗಿ, TPAP – Drought Prone Area Development Programme, DDP – Desert Development Programme, WDGP – Western Ghats Development Programme, ಇಂತಹ ಅನೇಕ ಕಾರ್ಯಕ್ರಮಗಳು ಜಾರಿಗೆ ಬಂದಿದ್ದಾವೆ. ಗ್ರಾಮೀಣ ಬಡತನ ನಿರ್ಮೂಲನೆಗೆ ರೂಪಿಸಿರುವ ಕೆಲವು ಯೋಜನೆಗಳ ಹೆಸರುಗಳು ಇತ್ತೀಚೆಗೆ ವ್ಯತ್ಯಾಸವಾಗಿರ ಬಹುದು. SGSY, ಸ್ವರ್ಣ ಜಯಂತಿ, ಗ್ರಾಮ ಸ್ವರಾಜ್‌ಗಾರ್ ಯೋಜನೆ, NREGS – National Rural Employment Guarantee Scheme, ಇವು ರಾಷ್ಟ್ರದ್ಯಂತ ಜಾರಿಗೆ ಬಂದಿದ್ದಾವೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೂ ಕೂಡ, PMSGY, ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿಗೆ, RIDF – Rural Infrastructure Development Fund, ಹೀಗೆ ಹಳ್ಳಿಯ ಗ್ರಾಮೀಣ ಜನರ ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೇಂದ್ರ ಮತ್ತು

ರಾಜ್ಯ ಸರ್ಕಾರಗಳು ಜಾರಿಗೆ ತಂದಿವೆ. ಇಲ್ಲಿ ನಾವು ನೀವು ಚಿಂತನೆ ಮಾಡಬೇಕಾಗಿರುವುದು ಇಷ್ಟೆಲ್ಲಾ ಯೋಜನೆಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೂ ಸಹ ನಮ್ಮ ನಿರೀಕ್ಷೆಯ ಮಟ್ಟಕ್ಕೆ ಬೇಡ, ಅದರ ಹತ್ತಿರಕ್ಕಾದರೂ ಸಹ ಪ್ರಗತಿಯನ್ನು ಸಾಧಿಸಲಾಗಲಿಲ್ಲ ಏಕೆ? ಗ್ರಾಮೀಣ ಜನರ ಬದುಕು ಹಸನವಾಗಲಿಲ್ಲವೇಕೆ? ಈ ಬಗ್ಗೆ ಬಹುಶಃ ಈ ಮನೆ ಮತ್ತು ಮೇಲ್ಮನೆಯಲ್ಲಿರುವ ಯಾವ ಸದಸ್ಯರಿಗೂ ಕೂಡ ಬಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಬಹುಶಃ ಇವತ್ತು ನಾವು ಚಿಂತನೆ ಮಾಡಬೇಕಾಗಿರುವುದು, ಇಂತಹ ಇನ್ನು ನೂರಾರು ಯೋಜನೆಗಳನ್ನು ಜಾರಿಗೆ ತರೋಣ. ಯೋಜನೆಯ ಹಣ ಸೋರಿಕೆಯಾಗದಂತೆ, ಭ್ರಷ್ಟಾಚಾರಕ್ಕೆ ಎಡೆಯಿಲ್ಲದೆ ಅವನಿಗೆ ತಲುಪಿಸುವಂತಹ ರಾಜಕೀಯ ಇಚ್ಛಾಶಕ್ತಿ, ನಿರ್ಧಾರಗಳು, ಪ್ರಾಮಾಣಿಕ ಪ್ರಯತ್ನ ಎಲ್ಲಿಯವರಿಗೆ ಆಗುವುದಿಲ್ಲವೋ, ಅಲ್ಲಿಯವರೆಗೆ ನಾವು ರಾಜಕೀಯ ಲಾಭಕ್ಕಾಗಿ ನಾವು ಮಾತನಾಡಬಹುದು, ಚುನಾವಣೆಯಲ್ಲಿ ಗೆಲ್ಲಬಹುದು, ಅಧಿಕಾರ ಸಿಗಬಹುದು. ಆದರೆ ಅವನು ಮಾತ್ರ ನೆಮ್ಮದಿಯಿಂದ ನಿಟ್ಟುಸಿರು ಬಿಡುವಂತೆ ಮಾಡುವುದಕ್ಕೆ ಮಾಡಲು ನಮ್ಮಿಂದ ಆಗುತ್ತಿಲ್ಲ. ಅನೇಕ ಸಂದರ್ಭದಲ್ಲಿ ನಾವು ದಿವಂಗತ ರಾಜೀವ್‌ಗಾಂಧಿಯವರ ಹೆಸರನ್ನು ಪ್ರಸ್ತಾಪ ಮಾಡುತ್ತೇವೆ. ದೆಹಲಿಯಿಂದ ನಾವು ನೂರು ರೂಪಾಯಿಯನ್ನು ಕಳುಹಿಸಿದರೆ 85 ಭಾಗ ಸೋರಿಕೆಯಾಗುತ್ತದೆ 15 ಭಾಗ ಮಾತ್ರ ಅವನಿಗೆ ತಲುಪುತ್ತದೆ ಎಂದು ಹೇಳುತ್ತಿದ್ದರು. ಜಯಚಂದ್ರರವರೆ ಪರ್ಸೆಂಟೇಜ್‌ನಲ್ಲಿ ವ್ಯತ್ಯಾಸವಿರಬಹುದು. ಆದರೆ ನಾಡಿನ ಜನ ಕೊಟ್ಟಂತಹ ತೆರಿಗೆ ಹಣವನ್ನು ಅವನಿಗೆ ತಲುಪಿಸುವಂತಹ ಸಂದರ್ಭದಲ್ಲಿ ಹಗಲು ದರೋಡೆಯಾಗುತ್ತಿದೆ, ಲೂಟಿಯಾಗುತ್ತಿದೆ, ಇದನ್ನು ತಡೆಯುವ ಬಗ್ಗೆ ನಾವು ನೀವು ಚರ್ಚೆ ಮಾಡಬೇಕೆಂಬುದು ಈ ಚರ್ಚೆಯ ಉದ್ದೇಶ. ಹಿಂದೆ ಅಧಿಕಾರ ನಡೆಸಿದಂತಹ ಯಾವುದೇ ರಾಜಕೀಯ ಪಕ್ಷದ ಬಗ್ಗೆ, ಯಾವುದೇ ಮುಖ್ಯಮಂತ್ರಿಯ ಬಗ್ಗೆ, ಮುಖಂಡನ ಬಗ್ಗೆ ಟೀಕೆ ಮಾಡುವುದಕ್ಕೋಸ್ಕರ ನಾನು ಇಲ್ಲಿ ನಿಂತಿಲ್ಲ. ಈ ವಾಸ್ತವಿಕ ಸತ್ಯಾಂಶ ನಮಗೆ ಗೊತ್ತಾದ ಮೇಲೆ ಸ್ವಾತಂತ್ರ್ಯ ಬಂದ 62 ವರ್ಷಗಳ ನಂತರವು ಸಹ ಮೂರನೆ ಒಂದು ಭಾಗದ ಜನ ಇವತ್ತು ಕೂಡ ಬಡತನದ ರೇಖೆಯ ಕೆಳಗಿದ್ದಾರೆ ಎನ್ನುವುದಾದರೆ, ಪ್ರತಿಶತಃ ಇನ್ನು 30ರಷ್ಟು ಜನ ಅನಕ್ಷರಸ್ಥರಾಗಿದ್ದಾರೆನ್ನುವುದಾದರೆ, ಪ್ರತಿದಿವಸ ಸಾವಿರಾರು ಜನ ಹಳ್ಳಿಬಿಟ್ಟು ನಗರಕ್ಕೆ ವಲಸೆ ಬರುತ್ತಿದ್ದಾರೆ, ನಗರ ಬೆಳೆಯುತ್ತಿದೆ ಎಂದರೆ ಅಲ್ಲಿ ಹಳ್ಳಿ

ಖಾಲಿಯಾಗುತ್ತಿದೆ, ವ್ಯದ್ಧಾಶ್ರಮವಾಗುತ್ತಿದೆ ಎಂದು ಅರ್ಥ. ಇದಕ್ಕೆ ಕಾರಣವನ್ನು ಹುಡುಕುವಂಥ ಪ್ರಾಮಾಣಿಕ ಪ್ರಯತ್ನ ಈ ಮೂರು ದಿವಸಗಳಲ್ಲಿ ಆಗಬೇಕೆನ್ನುವುದು ನನ್ನ ವಿನಂತಿ. ನಾವು ಬಹಳ ಜನ ಹಳ್ಳಿಯಲ್ಲಿ ಹುಟ್ಟಿಬಂದವರು, ಹಳ್ಳಿಯಲ್ಲಿ ಬೆಳೆದಂತವರು. ಅರೆ, ಇದು ಹೀಗೆ ಇದೆಯಲ್ಲಪ್ಪಾ, ಯಾವಾಗ ಸುಧಾರಣೆಯಾಗುತ್ತದೆ ಎಂದು ನಮ್ಮ ಕಾಲದಲ್ಲಿ ಅಧಿಕಾರಿಗಳನ್ನು ದೂಷಿಸುತ್ತಿದ್ದವರು ನಾವು, ಅಧಿಕಾರದಲ್ಲಿರುವವರನ್ನು ಬೆಟ್ಟು ಮಾಡಿ ತೋರಿಸಿದವರು ನಾವು. ಆದರೆ ಅವರಿಂದ ಆಯ್ಕೆಯಾಗಿ ಬಂದು ಇವತ್ತು ಕುಳಿತಿರುವ ನಾವು. ಅವರಿಂದ ಆಯ್ಕೆ ಆಗಿ ಬಂದು ಕುಳಿತಿರುವಂತಹ ನಾವು ಇವತ್ತೂ ಅದನ್ನೇ ಮುಂದುವರೆಯುವುದಕ್ಕೆ ಬಿಟ್ಟಿದ್ದೇವೆ. ಇದನ್ನು ಪರಿಸಪಡಿಸುವಂತಹ ಪ್ರಮಾಣಿಕ ಆತ್ಮಾವಲೋಕನ ನಮ್ಮಲ್ಲಿ ಆಗದೇ ಇದ್ದರೆ, ಇನ್ನು ಎಷ್ಟೇ ಲಕ್ಷಾಂತರ ಕೋಟಿ ರೂ. ತಂದು ಸುರಿದರೂ ಸುಧಾರಣೆ ಆಗುವುದಿಲ್ಲ. ಇದಕ್ಕೆ ಒಂದು ಮಾರ್ಗವನ್ನು ಹುಡುಕಿ ವಿಶೇಷ ಗಮನ ಕೊಡುತ್ತೇವೆನ್ನುವಂತಹ ಸಂಕಲ್ಪವನ್ನು ನಾವು ನೀವು ಎಲ್ಲಾ ಒಟ್ಟಿಗೆ ಸೇರಿ ಮಾಡಬೇಕೆಂದು ನನ್ನ ಸವಿನಯ ಪ್ರಾರ್ಥನೆ. ಇದು ನಾವು ಮಾಡುವುದಕ್ಕೆ ಆಗಲಿಲ್ಲ. ಎಂದರೆ ಇನ್ನು ಯಾರು ಮಾಡುವುದಕ್ಕೆ ಸಾಧ್ಯ? ನಾನು ಬೂಕನಕೆರೆ ಯವನು. ಮಂಡ್ಯ ಜಿಲ್ಲೆಯ ಹಳ್ಳಿ ನಿಮಗೆ ಗೊತ್ತಿದೆ. ನಾನು ಓದುತ್ತಿದ್ದ ಶಾಲೆಗೆ ಅಗತ್ಯವಾದ ನಾಲ್ಕೈದು ಕೊಠಡಿಗಳನ್ನು ಮತ್ತು ಕಾಂಪೌಂಡನ್ನು ಕಟ್ಟಿಸಿ ಕೊಡುವುದಕ್ಕಾಗಲಿಲ್ಲ. 3426 ಜನಸಂಖ್ಯೆ ಇರುವಂತಹ ಆ ಗ್ರಾಮದಲ್ಲಿ 70% ಕೃಷಿಕರು ಇದ್ದಾರೆ. ನನಗೆ ನೆನಪಿದೆ, ನಮ್ಮ ಮನೆಯ ಮುಂದೆ ಇರುವ ತೋಟ ಅರ್ಧ ಕಿ.ಮೀ. ಆಗುವುದಿಲ್ಲ, ನಮ್ಮ ಅಪ್ಪ ಬೆಳಿಗ್ಗೆ ಎದ್ದು ಹೊಗುತ್ತಿದ್ದಾಗ ಹೇಳುತ್ತಿದ್ದ ಮಾತುಗಳು ಹಳ್ಳಿಯ ಸ್ಥಿತಿಗಳು ಸುಧಾರಣೆ ಆಗದೆ ನಮ್ಮ ಪರಿಸ್ಥಿತಿಗಳು ಏನಾಗಬಹುದು ಎಂದು ಹೇಳುತ್ತಿದ್ದುದು ಜ್ಞಾಪಕ ಇದೆ. ಅವತ್ತು ನಮ್ಮ ಹಳ್ಳಿ ಏನಿತ್ತು, ಅವತ್ತು ಯಾವ ಬಡತನದ ದುಸ್ಥಿತಿಯಲ್ಲಿದ್ದರು ಇವತ್ತೂ ಅದೇ ಸ್ಥಿತಿ. ನಾನು ಓದುತ್ತಿದ್ದ ಶಾಲೆಯಲ್ಲಿ 324 ವಿದ್ಯಾರ್ಥಿಗಳು ಇದ್ದಾರೆ. 9 ಕೊಠಡಿಗಳು ಇವೆ, ಇನ್ನು ನಾಲ್ಕು ಕೊಠಡಿಗಳು ಬೇಕು, ಇನ್ನೂ ಕಾಂಪೌಂಡ್ ಹಾಕುವುದಕ್ಕಾಗಲಿಲ್ಲ. ಮನೆಗಳು ಇನ್ನೂ ಪೂರ್ಣ ಕಟ್ಟಿ ಕೊಡುವುದಕ್ಕಾಗಲಿಲ್ಲ. SSLC ಪಾಸ್ ಮಾಡಿದವನು ಮತ್ತೇನೋ ಮಾಡಿದವನು ಉದ್ಯೋಗ ಅರಸಿಕೊಂಡು ಹಳ್ಳಿ ಬಿಟ್ಟು ಮಂಡ್ಯಗೆ ಬಂದು ಉದ್ಯೋಗಕ್ಕೆ ಅಲೆಯುತ್ತಿರುವಂತಹ ದೃಶ್ಯ ಇವತ್ತೂ ಸಹ ನಮ್ಮ ಹಳ್ಳಿಯಲ್ಲಿ ನನ್ನ ಹುಟ್ಟೂರಿನಲ್ಲಿ ನಾನು ಮುಖ್ಯಮಂತ್ರಿ ಆದ

ಮೇಲೂ ಇವತ್ತಿಗೂ ಇರುವಂತಹ ದಾರುಣ ಸ್ಥಿತಿ. ಬಹುಶಃ ಇಲ್ಲಿರುವಂತಹ ಪ್ರತಿಯೊಬ್ಬ ಶಾಸಕರು ಹಳ್ಳಿಯಿಂದ ಬಂದಂತಹವರು ನನ್ನ ಹಳ್ಳಿ ನಾನು ಬಂದಾಗ ಹೇಗಿತ್ತು ನಾನು MLA ಆದಾಗ ಹೇಗಿತ್ತು, ನಾನು ಮಂತ್ರಿಯಾದ ಮೇಲೆ, ನಾನು ಹಳ್ಳಿಯ ಪ್ರತಿನಿಧಿ ಆಗಿ ಬಂದ ಮೇಲೆ ಹೇಗಿದೆ ಎಂದು ನೀವು ವಾಪಸ್ ನೋಡಿದರೆ, ಸ್ವಲ್ಪ ಸುಧಾರಣೆ ಆಗಿರಬಹುದು. ರಸ್ತೆಗಳ ಬಗ್ಗೆ ಇರಬಹುದು, ಕುಡಿಯುವ ನೀರಿನ ಬಗ್ಗೆ ಇರಬಹುದು, ನಮ್ಮ ರೈತನ ಸ್ಥಿತಿಗತಿಗಳ ಬಗ್ಗೆ ಇರಬಹುದು, ಶೌಚಾಲಯಗಳ ಬಗ್ಗೆ ಇರಬಹುದು, ಯಾವುದೇ ವಿಷಯ ಇರಲಿ, ಏನೂ ಮಾರ್ಪಾಡಾಗಿಲ್ಲ. ಹಾಗಾದರೆ ಕೊರತೆ ಎಲ್ಲಿ ಆಗಿತ್ತಿದೆ? ಮಾನವ ಅಭಿವೃದ್ಧಿ ಸೂಚಿ Human Development Index ಅಭಿವೃದ್ಧಿ ಎಂದರೆ ಕೇವಲ ರಸ್ತೆಗಳನ್ನು ನಿರ್ಮಾಣ ಮಾಡುವಂಥದ್ದು ನೀರಾವರಿ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮಾತ್ರವಲ್ಲ. ಒಂದು ನಾಡಿನ ಪ್ರಗತಿಯನ್ನು ಈ ಮಾನವ ಅಭಿವೃದ್ಧಿ ಸೂಚಿ HDI ಏನಿದೆ ಅದರ ಮೂಲಕ ಅಳೆಯುತ್ತಾರೆಂದು ಕೇಳಿದ್ದೇನೆ. E&DP 2001ರಲ್ಲಿ ಬರೆದಂತಹ ವರದಿ ಪ್ರಕಾರ ನಮ್ಮ ದೇಶ ವಿಶ್ವದಲ್ಲಿಯೇ 127ನೇ ಸ್ಥಾನದಲ್ಲಿದೆ. ಸ್ವಾತಂತ್ರ್ಯ ಬಂದು 62 ವರ್ಷಗಳ ನಂತರ ನಾವು 127ನೇ ಸ್ಥಾನದಲ್ಲಿದ್ದೇವೆ, ನಮ್ಮ ಇಷ್ಟು ವರ್ಷಗಳ ಸಾಧನೆಗೆ ವಿಶ್ವದಲ್ಲಿ 127ನೇ ಸ್ಥಾನ ಪಡೆದಿದ್ದೇವೆ. ಎಷ್ಟು ಶೋಚನೀಯವಾದ ಸ್ಥಿತಿ ಎಂದು ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದ ರಾಜ್ಯಗಳ HDI ತುಲನೆ ಮಾಡಿದಾಗ ಕರ್ನಾಟಕ 7ನೇ ಸ್ಥಾನದಲ್ಲಿದೆ. ದೇಶದ ಸರಾಸರಿ 0.621 ಆದರೆ ನಮ್ಮ ರಾಜ್ಯ 0.65 ಇದೆ. ಸ್ವಲ್ಪ ಮೇಲಿದ್ದರೂ ಸಹ ದಕ್ಷಿಣ ಭಾರತದಲ್ಲಿ ಕೇರಳ ಹಾಗೂ ತಮಿಳುನಾಡಿಗಿಂತ ನಾವು ಹಿಂದೆ ಇದ್ದೇವೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳೂ ಕೂಡ ನಮಗಿಂತ ಮುಂದೆ ಇವೆ. ನಮ್ಮ ರಾಜ್ಯದ ಜಿಲ್ಲೆಗಳಲ್ಲಿ HDI ಬಗ್ಗೆ ತುಲನೆ ಮಾಡಿ ನೋಡಿದಾಗ ಬೆಂಗಳೂರು ನಗರ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಮತ್ತು ಎರಡನೇ ಸ್ಥಾನ ಬಿಟ್ಟರೆ, ರಾಯಚೂರು ಕೊನೆಯ ಸ್ಥಾನದಲ್ಲಿದೆ. ಗುಲ್ಬರ್ಗ ಕೆಳಗಡೆಯಿಂದ ಸ್ವಲ್ಪ ಮೇಲೆ ಇರಬಹುದು. ಇದು ನಮ್ಮ ರಾಜ್ಯದ ಒಂದು ಪಕ್ಷಿ ನೋಟ. ಶಿವಮೊಗ್ಗ ಜಿಲ್ಲೆಯೂ 5ನೇ ಸ್ಥಾನದಲ್ಲಿದೆ. ಹಾಸನ 11ನೇ ಸ್ಥಾನ, ಮೈಸೂರು 14ನೇ ಸ್ಥಾನ, ಮಂಡ್ಯ 19ಸ್ಥಾನ, ಇದು ಕಳೆದ ಜನಗಣತಿ 2001ರ ಪ್ರಕಾರ ಇದೆ. ಮಾನ್ಯ ಅರವಿಂದ ಲಿಂಬಾವಳಿಯವರು ಬಹಳ ಉತ್ಸಾಹದಿಂದ

ನನ್ನನ್ನು ಕರೆದುಕೊಂಡು ಹೋಗಿ ಸಾಕ್ಷರತಾ ಪ್ರಮಾಣಗಳ ಬಗ್ಗೆ ಅಂಕಿಅಂಶಗಳನ್ನು ಕೊಟ್ಟರು. ರಾಜ್ಯದ ಸಾಕ್ಷರತಾ ಪ್ರಮಾಣ 66.60 ಇದ್ದರೆ, ಮಹಿಳಾ ಸಾಕ್ಷರತಾ ಪ್ರಮಾಣ ಕೇವಲ 56.9. ರಾಯಚೂರು ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ 35.9 ದೇವದುರ್ಗ ಮತ್ತು ಜೇವರ್ಗಿಯಲ್ಲಿ ಮಹಿಳಾ ಸಾಕ್ಷರತೆ ಈಗಲೂ 10% ಗಿಂತ ಕಡಿಮೆ ಇದೆ ಎಂದು ಹೇಳಿದರೆ, ಇದು ಅತ್ಯಂತ ವಿಷಾದನೀಯವಾದ ಸಂಗತಿ. 2005–06ರಲ್ಲಿ ರಾಷ್ಟ್ರೀಯ ಆರೋಗ್ಯ ಕುಟುಂಬ ಸಮೀಕ್ಷೆಯ ವರದಿ ಪ್ರಕಾರ ನಮ್ಮ ರಾಜ್ಯದಲ್ಲಿ ಶಿಶು ಮರಣ ಪ್ರಮಾಣ ಸಾವಿರಕ್ಕೆ 48 ಇದ್ದು, ದೇಶದ ಸರಾಸರಿ 57 ಇದೆ. ಸ್ವೀಯರ ಹೆರಿಗೆ ಸಮಯದಲ್ಲಿ ಮರಣ ಪ್ರಮಾಣ ಲಕ್ಷಕ್ಕೆ 228 ಇದೆ. ಶೌಚಾಲಯಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇವತ್ತೂ ಸಹ 90% ಜನರಿಗೆ ಬಯಲು ಮಲವಿಸರ್ಜನೆ ಅನಿವಾರ್ಯವಾಗಿರುವಂಥದ್ದು ನೋಡಿದ್ದೇವೆ. ನಮ್ಮ ಮನೆಯಲ್ಲಿ ನಮ್ಮ ಮಹಿಳೆಯರಿಗೆ ಈ ಪರಿಸ್ಥಿತಿ ಇದ್ದರೆ ಹೇಗೆ ಆಗಬಹುದು ಎಂದು ಒಂದು ಕ್ಷಣ ನಾವು ಯೋಚನೆ ಮಾಡಿದರೆ ಅದರ ಗಂಭೀರತೆ ನಮಗೆ ಅರ್ಥವಾಗಬಹುದು. ಇನ್ನು ಪ್ರಾದೇಶಿಕ ಅಸಮಾನತೆ ಬಗ್ಗೆ ನಾವು ಬಹಳ ಚರ್ಚೆಗಳನ್ನು ಮಾಡಿದ್ದೇವೆ. ಡಾ: ನಂಜುಂಡಪ್ಪ ವರದಿ ನಾನು ಬಂದ ಮೇಲೆ ಬಂದಿಲ್ಲ. ಡಾ: ನಂಜುಡಪ್ಪ ವರದಿ ಈ ಪ್ರಾದೇಶಿಕ ಅಸಮತೋಲನದ ಬಗ್ಗೆ 114 ತಾಲ್ಲೂಕುಗಳು ಹಿಂದೆ ಇವೆ, 39 ತಾಲ್ಲೂಕುಗಳು ಅತ್ಯಂತ ಹಿಂದುಳಿದ ಪಟ್ಟಿಯಲ್ಲಿವೆ, 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪೈಕಿ 24 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿವೆ, ದೇವದುರ್ಗ ಮತ್ತು ಜೇವರ್ಗಿ ರಾಜ್ಯದಲ್ಲಿ ಅತ್ಯಂತ ಕೊನೆಯ ಸ್ಥಾನದಲ್ಲಿರುವಂತಹ ಜಾಗ, ಇದು ಯಡಿಯೂರಪ್ಪ ಬಂದ ಮೇಲೆ ಆದುದು ಅಲ್ಲ. ನಮ್ಮ ಗಮನ ಕಡಿಮೆ ಆದುದರಿಂದ ಇಡೀ ರಾಜ್ಯದ ಅಭಿವೃದ್ಧಿ ಬಗ್ಗೆ ಸಮಗ್ರವಾಗಿ ಚಿಂತನೆ ಆಗದೇ ಇದ್ದುದರಿಂದ ಡಾ: ನಂಜುಂಡಪ್ಪ ವರದಿ ನಮ್ಮ ಕಣ್ಣು ತೆರೆಸಿದೆ ಅಷ್ಟೆ. ಅದಕ್ಕೋಸ್ಕರ ಮಾನ್ಯ ರೇವಣ್ಣರವರೇ, ಯಾರ ಬಗ್ಗೆಯೂ ನಾನು ಬೆಟ್ಟು ಮಾಡಿ ತೋರಿಸುವುದಕ್ಕೆ ಇಷ್ಟ ಪಡದೆ, ನಮ್ಮ ನಾಡು ನಿಜವಾದ ಚೆಲುವ ಕನ್ನಡ ನಾಡು ಯಾವಾಗ ಆಗಬೇಕು, ಇದಕ್ಕೆ ನಾವು ಏನು ಪ್ರಯತ್ನ ಮಾಡಬೇಕು, ಈ ಸಮಗ್ರ ಅಭಿವೃದ್ಧಿ ಕನಸು ಯಾವಾಗ ನನಸಾಗುತ್ತದೆ, ಈ ಬಗ್ಗೆ ನಾವು ಸ್ವಲ್ಪ ಚಿಂತನೆ ಮಾಡಬೇಕೆನ್ನುವುದು ನನ್ನ ಉದ್ದೇಶ. ಇದಕ್ಕೆ ಪ್ರೇರಣೆ ಏನು? ನವೆಂಬರ್

20, 2005ರಂದು ಭಾರತರತ್ನ ಡಾ: A.P.J. ಅಬ್ದುಲ್ ಕಲಾಂ ಇದೇ ವಿಧಾನಸಭೆಯಲ್ಲಿ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದರು. ಆ ಪುಣ್ಯಾತ್ಮ ದೆಹಲಿಯಲ್ಲಿ ಕುಳಿತು ಈ ದೇಶದ ಎಲ್ಲಾ ರಾಜ್ಯಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ನಮಗೆ ಕೆಲವು ಮಾರ್ಗದರ್ಶನಗಳನ್ನು ಮಾಡಿದರು. ಅವರು ಪ್ರಮುಖವಾಗಿ 11 ಧ್ಯೇಯೋದ್ದೇಶಗಳ ಬಗ್ಗೆ ನಮಗೆ ವಿವರಗಳನ್ನು ನೀಡಿದರು. ಜವಳಿ, ಇಂಧನ, ಜೈವಿಕ ಇಂಧನ ಪುರಸಭಾ ತ್ಯಾಜ್ಯದ ಮೂಲಕ ವಿದ್ಯುತ್ ಉತ್ಪಾದನೆ, ತೋಟಗಾರಿಕೆ, ಕೃಷಿ ಸಂರಕ್ಷಣೆ, ಜಲ ನಿರ್ವಹಣೆ, ಪ್ರವಾಸೋದ್ಯಮ, ಉತ್ತಮ ತರಬೇತಿ ಹೊಂದಿದ ಕಾರ್ಯ ವೈದ್ಯಕೀಯ ಸಿಬ್ಬಂದಿ ಮತ್ತು ತಜ್ಞರನ್ನು ತಯಾರುಗೊಳಿಸುವಂಥದ್ದು, ಜ್ಞಾನಾಧಾರಿತ ಕೈಗಾರಿಕೆಗಳ ಉತ್ಪನ್ನಗಳನ್ನು ಸೃಷ್ಟಿಸುವಂಥದ್ದು, ಸುಸ್ಥಿರ ಬೆಳವಣಿಗೆ ಸಂಪರ್ಕ ಜಾಲವನ್ನು ಕಲ್ಪಿಸುವಂಥದ್ದು, ಈ ರೀತಿ ಗ್ರಾಮೀಣಾಭಿವೃದ್ಧಿಯ ಪರ ಎನ್ನತಕ್ಕಂತಹ ಒಂದು ಯೋಜನೆ, ಪ್ರಗತಿ ವಾಹಕಗಳ ಅಭಿವೃದ್ಧಿ, ಹೀಗೆ ಡಾ: ಕಲಾರಂರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಯಾರು ತಜ್ಞರನ್ನು ನೇಮಕ ಮಾಡಿ ಒಂದು ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆಯನ್ನು ಮಾಡಬೇಕು, ಅವರು ಅಭ್ಯಾಸ ಮಾಡಿ ಒಂದು ವರದಿಯನ್ನು ನಮ್ಮ ಕಣ್ಣ ಮುಂದೆ ಇಟ್ಟಾಗ ಅದನ್ನು ಸಾಕಾರಗೊಳಿಸುವುದರ ಬಗ್ಗೆ ಆ ಪುಣ್ಯಾತ್ಮನ ಕನಸು ಏನಿದೆ, ಈ ಕಡೆ ಗಮನ ಕೊಡಿ ಎಂದು ಆ ಕಡೆ ನಾವು ಗಮನ ಕೊಡುವುದಕ್ಕೆ ಮುಂದೆ ಏನೇನು ಯೋಜನೆಗಳನ್ನು ಮಾಡಬೇಕು, ನಾವು ಏನೂ ಮಾಡಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಡಾ: ಕಲಾಂರವರು ಈ ಯೋಜನೆಗಳನ್ನು ಚಿಂತನೆಗಳನ್ನು ಹಂಚಿ ಕೊಟ್ಟ ಮೇಲೆ ಜವಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಹೊಸ ಜವಳಿ ನೀತಿಯನ್ನು ಈಗಾಗಲೇ ನಾವು ಆರಂಭ ಮಾಡಿದ್ದೇವೆ. ಈ ಜೈವಿಕ ಇಂಧನ ಕಾರ್ಯಪಡೆ ರಚಿಸಿ ಡಾ: ಕಲಾಂರವರ ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ್ ಗುರ್ರಪ್ಪ ಬೆಲ್ಲದ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

2-00 PM

ಬೆಂಗಳೂರಿನಲ್ಲಿ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ನಾವು ಈಗಾಗಲೇ ಅನುಮೋದನೆ ನೀಡಿದ್ದೇವೆ. ಶ್ರೇಫ್ರದಲ್ಲೆ ಮೊದಲನೇ ಘಟ್ಟ ಪ್ರಾರಂಭವಾಗುವುದರಲ್ಲಿದೆ. ತೋಟಗಾರಿಕೆ ಮಿಷನ್ ಮೂಲಕ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಮಾಡುವಂತಾದ್ದು, ಕೋಲಾರ ಮತ್ತು ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಹೆಜ್ಜೆ ಇಟ್ಟಿದ್ದೇವೆ, ಇದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಅವರ ಸಲಹೆಯಂತೆ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಆರಂಭವಾಗಿದೆ. ಕೃಷಿ ಸಂಸ್ಕರಣೆಗೆ ಮುಂದಿನ ದಿನಗಳಲ್ಲಿ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕಾಗಿದೆ. ಜಲ ನಿರ್ವಹಣೆ ಬಗ್ಗೆ ಚರ್ಚೆಯಾಯಿತು. ಮಳೆ ಕೊಯಿಲು ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯವನ್ನು ಮಾಡಬೇಕಾಗಿದೆ. ಹನಿ ಹನಿ ನೀರನ್ನು ಹಿಡಿದಿಡುವಂತಹ ಪ್ರಯತ್ನದಲ್ಲಿ ನಾವೇನಾದರೂ ವಿಶೇಷ ಕಾಳಜಿಯನ್ನು ವಹಿಸದಿದ್ದರೆ ಮುಂದೆ ದೊಡ್ಡ ಜ್ವಲಂತ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಈ ನೀರಿನ ಬವಣೆಯನ್ನು ನೀಗಿಸುವುದಕ್ಕೆ ಮಳೆ ನೀರು ಕೊಯ್ಲಿನ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಬರುವಂತಹ ದಿವಸಗಳಲ್ಲಿ ರೂಪಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶಗಳಿವೆ. ಐತಿಹಾಸಿಕ ಸ್ಥಳಗಳು, ಗಿರಿಧಾಮಗಳು, ವನ್ಯಮೃಗ, ಧಾಮಗಳು, ಕರಾವಳಿ ಬೀಚ್‌ಗಳ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳು ಇವೆ. ಬರುವಂತಹ ದಿವಸಗಳಲ್ಲಿ ನಾವು ಇದರ ಬಗ್ಗೆ ಗಮನ ಹರಿಸಬೇಕಾಗಿದೆ. ನರ್ಸಿಂಗ್ ಅಭ್ಯಾಸಕ್ಕೆ ಕೇರಳದ ಹೆಣ್ಣುಮಕ್ಕಳು ಇಲ್ಲಿಗೆ ಬರುತ್ತಾರೆ. ಲಕ್ಷಾಂತರ ನಮ್ಮ ಗ್ರಾಮೀಣ ಹೆಣ್ಣುಮಕ್ಕಳು ನಿರುದ್ಯೋಗಿಗಳಾಗಿದ್ದಾರೆ. ಆದರೆ ಇದು ಪವಿತ್ರವಾದಂತಹ ವೃತ್ತಿಯಾಗಿದ್ದು, ಇದರ ತರಬೇತಿಯನ್ನು ಪಡೆಯಬೇಕು ಎಂದು ನಮ್ಮ ಗ್ರಾಮೀಣ ಹೆಣ್ಣುಮಕ್ಕಳ ಮನವೊಲಿಸಿ ಈ ತರಬೇತಿಯನ್ನು ಕೊಡಿಸುವುದಕ್ಕೆ ನಮ್ಮಿಂದ ಸಾಧ್ಯವಾಗಲಿಲ್ಲ. ಸಮಸ್ಯೆ ಎಲ್ಲಾ ಕಡೆ ಇದೆ. ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವುದಕ್ಕೋಸ್ಕರ ಮನೆ ಮಠಗಳನ್ನು ಬಿಟ್ಟು ಎಲ್ಲೋ ಒಂದು ಕಡೆ ರೂಮಿನಲ್ಲಿ 25–30 ಜನ ಕೃಷಿ ಜೀತದಾಳುಗಳಂತೆ ಎರಡು ಹೊತ್ತಿನ ಊಟಕ್ಕೋಸ್ಕರ ವಾಸ ಮಾಡುತ್ತಿದ್ದಾರೆ. ಆದರೆ ನರ್ಸಿಂಗ್ ಟ್ರೇನಿಂಗ್ ಪಡೆದರೆ ಅನುಕೂಲವಿದೆ, ಒಳ್ಳೆಯ ಸಂಬಳ ಸಿಗುತ್ತದೆ, ಸೇವೆ ಮಾಡುವಂತಹ ಕೆಲಸ ಎನ್ನುವುದಿದ್ದರೂ ಸಹ ಅವರಿಗೆ ಮನವರಿಕೆ

ಮಾಡುವುದಕ್ಕೆ ನಮಗೆ ಇದುವರೆಗೆ ಅಗಲಿಲ್ಲ. ಆದುದರಿಂದ ಈ ದಿಕ್ಕಿನಲ್ಲಿ ನರ್ಸಿಂಗ್ ಕಾಲೇಜುಗಳು, ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದೇವೆ, ಇಲ್ಲವೆಂದು ಅಲ್ಲ. ಆದರೆ ಈ ದಿಕ್ಕಿನಲ್ಲಿ ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದರ ಬಗ್ಗೆ, ರೈತ ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಬರದೆ ಅಲ್ಲಿಯೇ ಅವನು ಇರುವುದಕ್ಕೆ ಬೇಕಾದಂತಹ ಅನುಕೂಲಗಳನ್ನು ಮಾಡಿ ಕೊಡುವುದರ ಬಗ್ಗೆ, ಸಾರಿಗೆ ವ್ಯವಸ್ಥೆಗಳನ್ನು ಹೆಚ್ಚು ಮಾಡಿಕೊಡುವುದರ ಬಗ್ಗೆ, ಇನ್ನು ವಿಶೇಷವಾದಂತಹ ರಸ್ತೆ ಮತ್ತು ರೈಲ್ವೆ ಸಂಪರ್ಕ, ಉಗ್ರಾಣ, ಮಾರುಕಟ್ಟೆ, ಕೃಷಿ ಕೈಗಾರಿಕೆಗಳ ಸ್ಥಾಪನೆ ಮಾಡುವಂಥಾದ್ದು, ಜ್ಞಾನಾಧಾರಿತ ಸಂಪರ್ಕ ಜಾಲಗಳನ್ನು ಅಭಿವೃದ್ಧಿ ಪಡಿಸುವಂತಾದ್ದು, ಈ ಪುರ ಕಲ್ಪನೆ ಹಿನ್ನೆಲೆಯಲ್ಲಿ 1,100 ಕೋಟಿ ರೂಪಾಯಿಗಳನ್ನು ತಾಲ್ಲೂಕು ಕೇಂದ್ರಗಳು ಮತ್ತು ಜಿಲ್ಲೆ ಕೇಂದ್ರಗಳ ಅಭಿವೃದ್ಧಿಗೆ ಈ ವರ್ಷದಲ್ಲಿ ನಾವು ಆಯವ್ಯಯದಲ್ಲಿ ಹಣವನ್ನು ತೆಗೆದಿಟ್ಟಿದ್ದೇವೆ. ಹೋಬಳಿ ಕೇಂದ್ರಗಳಲ್ಲಿ ಸಹ ಹೋದ ವರ್ಷದಿಂದ ಸುವರ್ಣ ಗ್ರಾಮೋದಯದ ಕಲ್ಪನೆ ಅಡಿಯಲ್ಲಿ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಏನು ಖರ್ಚು ಮಾಡುತ್ತೇವೆ, ಅದಕ್ಕೆ ಸಂಬಂಧಪಟ್ಟಂತೆ ನಮ್ಮ ಶಾಸಕ ಮಿತ್ರರಲ್ಲಿ ವಿನಂತಿ ಮಾಡುವಂತಾದ್ದು, ಈಗ ಇಷ್ಟೆಲ್ಲ ಚರ್ಚೆಯಾದ ಮೇಲೆ ಒಂದು ಗ್ರಾಮ ಪಂಚಾಯಿತಿಯಲ್ಲಿ ನಮ್ಮೆಲ್ಲ ಗೌರವಾನ್ವಿತ ಸದಸ್ಯರಿಗೆ ಹಾಗೂ ನಮಗೆ ಗೊತ್ತಿರುವ ಹಾಗೆ ಒಂದು ಕೋಟಿ ರೂಪಾಯಿ ಎಂದರೆ ಒಂದು ಹಳ್ಳಿ ಪಂಚಾಯಿತಿಯಲ್ಲಿ 20 ವರ್ಷದ ಕಾರ್ಯಕ್ರಮ. ಈಗ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣದ ಜೊತೆಗೆ ಬೇರೆ ಬೇರೆ ಇಲಾಖೆಯ ಹಣವನ್ನು ಖರ್ಚು ಮಾಡಿದರೂ ಸಹ ಅಲ್ಲಿ ಅದನ್ನು ನೋಡುವುದಕ್ಕೆ ಹೋದರೆ ಕಳಪೆ ರಸ್ತೆಗಳು, ಕಳಪೆ ಚರಂಡಿಗಳು. ಎಂದರೆ ಇದಕ್ಕೆ ನಮ್ಮ ಸಹಕಾರ ಇಲ್ಲದೆ ಅಥವಾ ನಾವು ಆ ಕಡೆ ಗಮನ ಕೊಡದೇ, ಅಧಿಕಾರಿಗಳು ಏನೂ ಮಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಬಂದಿದೆ, ಅಧಿಕಾರ ವಿಕೆಂದ್ರಿಕರಣವಾಯಿತು. ಯಾರೋ ಎಂಎಲ್ಎ ಬೆಂಗಳೂರಿನಲ್ಲಿ ಕುಳಿತುಕೊಂಡು, ಯಾರೋ ಎಂಪಿ ಡೆಲ್ಲಿಯಲ್ಲಿ ಕುಳಿತುಕೊಂಡು ಯೋಜನೆ ಮಾಡುವುದಲ್ಲ. ನಮ್ಮ ಊರಿನ ಯೋಜನೆ ನಾವೇ ಮಾಡಬೇಕೆಂದು ಗ್ರಾಮಪಂಚಾಯಿತಿ ವ್ಯವಸ್ಥೆ ಬಂತು. ಚುನಾಯಿತ ಪ್ರನಿನಿಧಿ ಹಳ್ಳಿಯಲ್ಲಿ ಇದ್ದಾನೆ. ಆದರೆ ಏನಾಗುತ್ತಿದೆ? ಇವತ್ತಿನ ದಯನೀಯ ಸ್ಥಿತಿಯನ್ನು ನೋಡಿದರೆ ಭ್ರಷ್ಟಾಚಾರ ವಿಕೇಂದ್ರಿಕರಣವಾಯಿತು ಎಂದು

ಬೇಕಾದರೆ ಹೇಳಬಹುದೇನೋ, ನಾನು ಈ ಮಾತನ್ನು ನೊಂದು ಹೇಳುತ್ತೇನೆ. ಎಲ್ಲಾದರೂ ಒಂದು ಕಡೆ ಅವರಿಗೆ ತರಬೇತಿ ಕೊಡುವಂತಹ ವ್ಯವಸ್ಥೆಯಿದೆಯೇ? ನೀವು ಗ್ರಾಮ ಮಟ್ಟದಲ್ಲಿ ಏಕೆ ಚುನಾಯಿತ ಪ್ರತಿನಿಧಿಯಾಗಿ ಬರುತ್ತಿದ್ದೀಯಾ? ಜನ ನಿನ್ನಿಂದ ಏನು ನಿರೀಕ್ಷೆ ಮಾಡುತ್ತಿದ್ದಾರೆ? ಈ ಬಗ್ಗೆ ನೀನು ಹೆಚ್ಚು ಒತ್ತನ್ನು ಕೊಡುವುದರ ಬಗ್ಗೆ ಚಿಂತನೆ ಮಾಡಬೇಕೆಂದು ನಾವು ಶಾಸಕರು ಅವರ ಜೊತೆ ಕುಳಿತು ಮಾತನಾಡುವುದಕ್ಕೆ ಪುರುಸೊತ್ತಿದೆಯೇ? ನಾವು ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವಾ? ನಮಗೆ ಆಶ್ಚರ್ಯವಾಗುತ್ತದೆ ಮಾನ್ಯ ಶಿವಕುಮಾರ್‌ರವರೇ, ಒಂದೊಂದು ಕಾರ್ಪೊರೇಷನ್‌ಗೆ ನೂರು ಕೋಟಿ ರೂಪಾಯಿ ಕೊಡುತ್ತೇನೆಂದು ನಾನು announce ಮಾಡಿದೆ. ಇಡೀ ಏಳು ಕಾರ್ಪೊರೇಷನ್‌ಗಳಲ್ಲಿ ಎರಡು ಕಾರ್ಪೊರೇಷನ್ ಬಿಟ್ಟು ಉಳಿದವರು ಇನ್ನೂ estimate, plan, Corporators ಭಿನ್ನಾಭಿಪ್ರಾಯಗಳು ಇದೆ, ನಾವು ದುಡ್ಡು ಕೊಟ್ಟಿದ್ದು, ತೆರಿಗೆ ಹಣವಲ್ಲ ಕಾರ್ಪೊರೇಷನ್‌ದು, ನೀವು ಮಧ್ಯಪ್ರವೇಶ ಮಾಡಬೇಡಿರಿ, ಅಲ್ಲಿರುವಂತಹ experts ಎಲ್ಲ ಕುಳಿತುಕೊಂಡು ಒಂದು blue print ready ಮಾಡಿ ಎರಡು ಮೂರು ವರ್ಷದಲ್ಲಿ ನೂರು ನೂರು ಕೋಟಿ ರೂಪಾಯಿ ಕೊಟ್ಟರೆ, ಆ ನಗರ ಸಮಗ್ರ ಅಭಿವೃದ್ಧಿಯಾಗಬೇಕೆಂದು ಬಡಿದುಕೊಂಡರೂ ಸಹ ಕಚ್ಚಾಟ ಮಾಡುತ್ತಾ ನನ್ನ ವಾರ್ಡ್‌ನಲ್ಲಿ ಕೆಲಸವಾಗಬೇಕು, ಇನ್ನೊಂದು ವಾರ್ಡ್‌ನಲ್ಲಿ ಕೆಲಸವಾಗಬೇಕು. ಅದು ಹರಿದು ಹಂಚಿ ಹೋಗಬೇಕು. ಬರುವಂತಹ ಮೂರ್ನಾಲ್ಕು ವರ್ಷಗಳಲ್ಲಿ ಸಮಗ್ರವಾಗಿ ಇಡೀ ಕಾರ್ಪೊರೇಷನ್‌ಗೆ ನಮ್ಮ ಹತ್ತಿರ ದುಡ್ಡಿಲ್ಲ, ಸರ್ಕಾರ ದುಡ್ಡು ಕೊಡುತ್ತಿದೆ. ಅಲ್ಲಿನ ಚುನಾಯಿತ ಪ್ರತಿನಿಧಿಗಳೇ ಕುಳಿತುಕೊಂಡು ಒಳ್ಳೆಯ ಹೆಸರು ಬರುವಂತಹ ರೀತಿಯಲ್ಲಿ ಅಧಿಕಾರಿಗಳಿಗೆ ಸಹಕಾರ ನೀಡದಿದ್ದರೆ ಅಲ್ಲಿರುವಂತಹ ನಮ್ಮ ಅಧಿಕಾರಿಗಳ ಏನು ಮಾಡುತ್ತಾರೆ? ನಾನು ಹತ್ತಾರು ಸಭೆಗಳನ್ನು ಮಾಡಿದ್ದೇನೆ. ನೀವು ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ನೋಡಿದ್ದೀರಿ. ಅಲ್ಲಿ ಕಾರ್ಪೊರೇಟರ್ ಕೋ ಅಪರೇಟ್ ಮಾಡುವುದಿಲ್ಲ. ಆದರೆ ನನ್ನ ಕ್ಷೇತ್ರಕ್ಕೆ ದುಡ್ಡು ಬೇಕು ಅಷ್ಟೇ. ಈ ರೀತಿಯ ಮನೋಭಾವನೆ ಏನಿದೆ ಇದನ್ನು ಸ್ವಲ್ಪ ಸುಧಾರಣೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ನೀವೆಲ್ಲಾ ಸೇರಿಕೊಂಡು ಮಾಡಬೇಕಾಗಿದೆ. ನಾನು ಇಲ್ಲಿ ಯಾವುದೇ ಕಾರಣಕ್ಕೂ ಸುದೀರ್ಘ ಭಾಷಣ ಮಾಡುವುದಕ್ಕೆ

ಹೊರಟಿಲ್ಲ. ಏಕೆಂದರೆ ನಾವು ಏನೇನು ಮಾಡಿದ್ದೇವೆ ಎಂದು ಹೇಳುವ ಅಗತ್ಯವಿಲ್ಲ, ನಮ್ಮ ಕರ್ತವ್ಯ ಮಾಡಿದ್ದೇವೆ. ಇದರಲ್ಲಿ ಹೆಗ್ಗಳಿಕೆ ಏನಿದೆ? ನಾವು ಬಂದ ಮೇಲೆ ಗ್ರಾಮೀಣ ಅಭಿವೃದ್ಧಿಗೆ ಗಮನ ಕೊಟ್ಟಿದ್ದೇವೆಂದರೆ, ಅದು ನಮ್ಮ ಕರ್ತವ್ಯ, ಜನ ಅದಕ್ಕೆ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುವಂತಹ ನಮ್ಮ ಮಾಲೀಕರು. ಆದರೆ ನಾವು ಮುಂದೆ ಏನು ಮಾಡಬೇಕು? ಕೊರತೆಗಳು ಏನಾಗಿದೆ? ಇದನ್ನು ಸರಿಪಡಿಸುವುದು ಹೇಗೆ? ಈ ನಿಟ್ಟಿನಲ್ಲಿ ಉತ್ತಮವಾದಂತಹ ಸಲಹೆಯನ್ನು ನೀವು ಕೊಡಬೇಕು ಹಾಗೂ ಅದರ ಬಗ್ಗೆ ಚಿಂತನೆಯಾಗಬೇಕು ಎನ್ನುವುದು ನನ್ನ ಉದ್ದೇಶ. ಮೂರು ದಿವಸ ಚರ್ಚೆ ಮಾಡುವುದಕ್ಕೆ ಇನ್ನೇನಿದೆ? ಒಬ್ಬೊಬ್ಬ ಶಾಸಕರ ಮನಸ್ಸಿನಲ್ಲಿ ಒಂದೊಂದು ಭಾವನೆಗಳು ಇರಬಹುದು. ಅವರ ಸಲಹೆಗಳನ್ನು ಕೇಳಿ ಏನಾದರೂ ಬದಲಾವಣೆ ತರುವುದಕ್ಕೆ ಸಾಧ್ಯವಿದೆಯೇ ಎಂದು ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಜಯಚಂದ್ರರೇ ನಾನು ಮಾಡುತ್ತಿರುವುದು. ಕೃಷಿ ಗ್ರಾಮೀಣಾಭಿವೃದ್ಧಿ ನಾವು ಎಷ್ಟು ಮಾಡಿದರೂ ಕಡಿಮೆಯೇ. ಈಗ ಏನೋ ಮಾಡಿಬಿಟ್ಟಿದ್ದೇವೆ ಎಂದು ಅಲ್ಲ. ನಾನು ಅನೇಕ ದಿವಸ ನಿದ್ದೆ ಮಾಡುವುದಿಲ್ಲ. ಇವತ್ತು ಇದರ ಬಗ್ಗೆ ಚರ್ಚೆಯಾಗುತ್ತದೆ ಎಂದು ನನಗೆ ಗೊತ್ತಿತ್ತು, ನಾನು ಚೈನಾದಿಂದ ಬಂದೆ, ನಾನು ಇಡೀ ರಾತ್ರಿ ನಿದ್ದೆ ಮಾಡಿಲ್ಲ. ಪ್ರತಿಪಕ್ಷದ ನಾಯಕರು ನಮ್ಮನ್ನು ಯಾವ ಕಡೆಗೂ ಎಳೆದುಕೊಂಡು ಹೋಗದೇ ಒಂದು ಒಳ್ಳೆಯ ವಾತಾವರಣದಲ್ಲಿ ಚರ್ಚೆಯಾದರೆ ಸಾಕು ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೆ. ಅದಕ್ಕೆ ನನಗೆ ಪ್ರಾರಂಭದಲ್ಲಿ ದುಃಖವಾಗಿದ್ದು. ಈ ಗ್ರಾಮೀಣಾಭಿವೃದ್ಧಿ ಬಗ್ಗೆ, ಕೃಷಿಕನ ಬಗ್ಗೆ ಚರ್ಚೆಯಾಗುವ ಸಮಯದಲ್ಲಿ ಮಾನ್ಯ ಜಯಚಂದ್ರರವರೇ, ಅತಿವೃಷ್ಟಿ ಬಗ್ಗೆ, ಬರಗಾಲದ ಬಗ್ಗೆ ನಾವೇನು ಮಾಡುತ್ತಿದ್ದೇವೆ? ಪರಿಹಾರ ಕೊಡುವುದು ಯಾವ ಮೂಲೆಗೆ ಸಾಲುತ್ತದೆ? ಭಿಕ್ಷೆ ಕೊಟ್ಟ ಹಾಗೆ ಕೊಡುತ್ತಿದ್ದೇವೆ. ಅದರಲ್ಲಿ ಏನು ತರಬಹುದು? ಏನು ವ್ಯತ್ಯಾಸ ಮಾಡಬಹುದು? ಬೆಳೆ ನಾಶವಾದಂತಹ ರೈತನಿಗೆ ಭಿಕ್ಷೆ ರೀತಿಯಲ್ಲಿ ಒಂದು ಎಕರೆಗೆ 400 ರೂಪಾಯಿ ಅಥವಾ 1.000 ರೂಪಾಯಿ ಕೊಟ್ಟುಬಿಟ್ಟರೆ ಅವನು ತಂದಂತಹ ಬಿತ್ತನೆ ಬೀಜ ಹಾಗೂ ಅವನ ಹೆಂಡತಿ ಮಕ್ಕಳು ಕೆಲಸ ಮಾಡಿದಂತಹ ಕೂಲಿಗೆ ಸಾಕಾಗುವುದಿಲ್ಲ. ಎಷ್ಟು ವರ್ಷ ಅವನು ಹೀಗೆ ಮುಂದುವರೆಸಿಕೊಂಡು ಹೋಗಬೇಕು? ಇದಕ್ಕೆ ಏನಾದರೂ ಪರ್ಯಾಯ ಮಾರ್ಗವಿದೆಯೇ? ನಮಗೆ ಇದಕ್ಕೆ ಸಂಪನ್ಮೂಲ ತರುವಂತಹ ಶಕ್ತಿ ಇದೆಯೇ? ಹಾಗಾದರೆ ಎಲ್ಲಿಂದ ತರಬೇಕು? ಕೇಂದ್ರ ಸರ್ಕಾರ

ಯಾವರೀತಿ ಇದಕ್ಕೆ ಗಮನ ಕೊಡಬೇಕು? ನಾವು ಯಾವರೀತಿ ಅವರ ಹತ್ತಿರ ಹೋಗಿ ವಿನಂತಿ ಮಾಡಬೇಕು? ಈ ನಿಟ್ಟಿನಲ್ಲಿ ಚಿಂತನೆ ಆಗಬೇಕಾಗಿದೆ. ಮಾಹಾತ್ಮ ಗಾಂಧಿಯವರು ಬಹಳ ಹಿಂದೆ ಗ್ರಾಮೋತ್ಥಾನ ಮತ್ತು ಭಾರತೀಯ ಜೀವನ ಮೌಲ್ಯಗಳ ಬಗ್ಗೆ ಚಿಂತನೆ ಮತ್ತು ಮಾತುಗಳನ್ನು ನಾವು ಗಮನಿಸಬೇಕಾಗಿದೆ. ನಿಜವಾಗಲೂ ನಾವು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲಬೇಕಾದರೆ ಜನ ಈ ರೀತಿ ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಬರುವುದರ ಬದಲು ಮೂಲಭೂತ ಸವಲತ್ತುಗಳು ಇಲ್ಲದೇ ಅಲ್ಲಿ ಉಸಿರು ಕಟ್ಟಿ ಬದುಕುವಂತಹ ವಾತಾವರಣವನ್ನು ನಾವೇನು ಸೃಷ್ಟಿ ಮಾಡಿಕೊಂಡಿದ್ದೇವೆ, ಹಳ್ಳಿಯ ಯುವಕರು, ಮಹಾತ್ಮಾ ಗಾಂಧಿ ಅಪೇಕ್ಷೆ ಏನಿತ್ತು ಎಂದರೆ ವಿದ್ಯಾವಂತಹ ಯುವಕರು ಹಳ್ಳಿಗೆ ಹೋದಾಗ ಅಲ್ಲಿ ಅನ್ಯಾಯದ ವಿರುದ್ಧ ಹೋರಾಟ ಮಾಡಿ ಅಲ್ಲಿ ಸುಧಾರಣೆ ತರಬೇಕು. ಒಬ್ಬ ಎಂಪಿ, ಒಬ್ಬ ಎಂಎಲ್‌ಎ, ಒಬ್ಬ ಮಂತ್ರಿ, ಒಬ್ಬ ಮುಖ್ಯಮಂತ್ರಿಯಿಂದ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಯುವಕರಲ್ಲಿ ಜಾಗೃತೆ ಬರಬೇಕು. ಅಲ್ಲಿರುವ ಯುವ ಪೀಳಿಕೆಯಲ್ಲಿ ಜಾಗೃತಿಯನ್ನು ತರಬೇಕು. ನಿನ್ನ ಕರ್ತವ್ಯ ಇದೆ. ನಿನಗಾಗಿ ಬದುಕುವುದನ್ನು ಯಾರು ಹೇಳುವ ಅಗತ್ಯವಿಲ್ಲ. ಸಮಾಜಕ್ಕಾಗಿ ಬದುಕುವಂತಹ ಅದರ ಋಣ ತೀರಿಸುವಂತಹ ಜವಾಬ್ದಾರಿ ನಿಮಗಿದೆ. ಈ ರೀತಿ ಒಂದು ಪ್ರಯತ್ನ ಮಾಡಬೇಕು. ನನಗೆ ಈಗಲೂ ನೆನಪಿದೆ. ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಇಲ್ಲಿಗೆ ಬಂದರು. ಮಾನ್ಯ ನಿಜಲಿಂಗಪ್ಪನವರು, ಮಾನ್ಯ ಯಡಿಯೂರಪ್ಪನವರೇ ಅವರು ಬಂದಾಗ ನಾನು ಭೇಟಿ ಮಾಡಬೇಕು, ಸಮಯ ನಿಗದಿ ಮಾಡಿ ಎಂದು ಹೇಳಿದರು. ಎಷ್ಟಾದರೂ ಮಾನ್ಯ ನಿಜಲಿಂಗಪ್ಪ ಹಾಗೂ ಅಟಲ್‌ಜಿಯವರು ಆ ಲೆವೆಲ್‌ನವರು, ನಾನು ಈ ಲೆವೆಲ್‌ನವರು. ಆಯಿತು ನಾನು ನಿಗದಿ ಮಾಡುತ್ತೇನೆ, ಅವರ ಜೊತೆ ಮಾತನಾಡಿ ಬಿಟ್ಟು ಸಮಯ ಕೊಡುತ್ತೇನೆಂದು ನಾನು ಮಾನ್ಯ ನಿಜಲಿಂಗಪ್ಪನವರಿಗೆ ಹೇಳಿದ್ದೆನು. ಅಟಲ್‌ಜಿಯವರು ಮಾನ್ಯ ನಿಜಲಿಂಗಪ್ಪನವರನ್ನು ಭೇಟಿ ಮಾಡುವುದಕ್ಕೆ ಸಮಯ ಬೇಕು ಎಂದು ಬಂದರು. ಮಾನ್ಯ ರೇವಣ್ಣನವರೇ ನೀವು ನಂಬುತ್ತೀರೋ ಇಲ್ಲವೋ, ನಿಜಲಿಂಗಪ್ಪನವರು ನನ್ನನ್ನು ಹುಡುಕಿಕೊಂಡು ಗೆಸ್ಟ್ ಹೌಸ್‌ಗೆ ಬರುವುದೇ? Nothing doing, ನಡೆಯಿರಿ ಅವರು ಎಲ್ಲಿದ್ದಾರೋ ನಾವು ಅಲ್ಲಿಗೆ ಹೋಗೋಣ ಎಂದು ಹೇಳಿದರು. ಮಾನ್ಯ ರೇವಣ್ಣನವರೆ, ನೀವು ನಂಬುತ್ತಿರೋ, ಇಲ್ಲವೋ ಗೊತ್ತಿಲ್ಲ. ಮಾನ್ಯ ನಿಜಲಿಂಗಪ್ಪನವರು ನನ್ನನ್ನು

ಹುಡುಕಿಕೊಂಡು Guest House ಬರುವುದಾ? Nothing doing, ಅವರು ಎಲ್ಲಿ ಇದ್ದಾರೋ, ಅಲ್ಲಿಗೆ ನಾವು ಹೋಗೋಣವೆಂದು ಹೋದರೆವು. ಆಗ ಮಾನ್ಯ ನಿಜಲಿಂಗಪ್ಪನವರು ಹೇಳಿದಂಥ ಒಂದು ಮಾತು ಆಶ್ಚರ್ಯ ವಾಯಿತು. ಅವರು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರೇ ನಾನು ನಿಮ್ಮನ್ನು ಏನೂ ಕೇಳುವುದಕ್ಕೆ ಕರೆಸಿಲ್ಲ. ನೀವೇ ಗೌರವದಿಂದ ಇಲ್ಲಿಗೆ ಬಂದಿದ್ದೀರಿ. ನಿಮ್ಮಲ್ಲಿ ನನ್ನದು ಪ್ರಾರ್ಥನೆ ಏನೆಂದರೆ, ನೀವು ಈ ದೇಶದ ಎಲ್ಲಾ ನದಿಗಳನ್ನು ಜೋಡಣೆ ಮಾಡುವುದಕ್ಕೆ ಪ್ರಯತ್ನ ಮಾಡಿ, ರೈತನ ಹೊಲಕ್ಕೆ ನೀರನ್ನು ಕೊಡಿಯೆಂದು ಹೇಳಿದರು. ಇದಕ್ಕೆ ಕೇಂದ್ರದಲ್ಲಿ ಎಷ್ಟೆ ಸರ್ಕಾರಗಳು ಬರಲಿ, ಏನೂ ಮಾಡುವುದಕ್ಕಾಗುವುದಿಲ್ಲ. ನಿಮಗೆ ಗ್ರಾಮೀಣ ಜನರು ಬದುಕಬೇಕೆಂದು ಇದ್ದರೆ, ಮೊದಲು ಅವರ ಹೊಲಕ್ಕೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡಿ. ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಎಲ್ಲೆಲ್ಲಿ ಅವಕಾಶಗಳು ಇದೆಯೋ ಅಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಗಮನ ಕೊಡಿಯೆಂದು ಹೇಳಿದರು. ಇವತ್ತಿಗೂ ನೂರಕ್ಕೆ ಎಪ್ಪತ್ತು ಜನ ರೈತರು ಒಣ ಬೇಸಾಯವನ್ನು ಮಾಡುತ್ತಿದ್ದಾರೆ. ಇದರ ಆಧಾರದ ಮೇಲೆ ಆ ಮಾತನ್ನು ಅವರು ಹೇಳಿದರು. ಇವತ್ತಿಗೂ ಅದೇ ಸ್ಥಿತಿ ಇದೆ. ನನಗೆ ದುಃಖವಾಗುವ ಸಂಗತಿಯೆಂದರೆ, ತಿರುವಳ್ಳವರ್ ಮತ್ತು ಸರ್ವಜ್ಞರ ಪ್ರತಿಮೆಗಳು ಪ್ರತಿಷ್ಠಾಪನೆಯಾಯಿತು. ನಾನು ಅನಿರೀಕ್ಷಿತವಾಗಿ ಚೆನ್ನೈಗೆ ಹೋಗಿದ್ದೆ. ನಾನು ಆರು ತಿಂಗಳು, ವರ್ಷಕ್ಕೆ ಒಂದು ಸಾರಿ ಡಯಾಬಿಟಿಸ್ ಟೆಸ್ಟ್‌ಗೆ ಹೋಗುತ್ತಾ ಇರುತ್ತೇನೆ. ಆಗ ಅವರು ನನ್ನನ್ನು ನೋಡುವುದಕ್ಕೆ ಬರುತ್ತೇನೆಂದು ಹೇಳಿದರು. ಅವರಿಗೆ ಅಷ್ಟು ವಯಸ್ಸಾಗಿದ್ದು ನಡೆಯುವುದಕ್ಕೆ ಆಗುವುದಿಲ್ಲ. ಅದರೂ ಅವರು ಬರುತ್ತೇನೆಂದರು. ನಾನು ಅಂದುಕೊಂಡಿದ್ದೇನೆಂದರೆ ಆರೋಗ್ಯ ಚೆನ್ನಾಗಿದೆ. ಇಡೀ ಜಗತ್ತಿಗೆ ಯಡಿಯೂರಪ್ಪನವರಿಗೆ ಏನೋ serious ಆಗಿದೆ, ಅದಕ್ಕೆ ಬಂದರೆಂದು ಕೊಳ್ಳುವುದು ಒಂದು. ಎರಡನೆಯದಾಗಿ ಅವರು ಹಿರಿಯರಾಗಿದ್ದು, ಅವರನ್ನು ನಾನು ಹೋಗಿ ಭೇಟಿ ಮಾಡೋಣವೆಂದು ನಾನೇ ಅವರ ಮನೆಗೆ ಹೋದೆ. ಅಲ್ಲಿ ನೋಡಿದಂಥ ಆಶ್ಚರ್ಯವೇನೆಂದರೆ ಅವರು ನಮ್ಮನ್ನು ಕಂಡಂಥ ರೀತಿ, ನಡೆದುಕೊಂಡಂಥ ರೀತಿ, ನಾನು ತಿರುವಳ್ಳವರ್ ಪ್ರತಿಮೆಯ ಪ್ರತಿಷ್ಠಾಪನೆಗೆ ನೀವು ಬನ್ನಿಯೆಂದು ಕರೆಯಲು ಹೋದಾಗ ಅವರು ಬೆಂಗಳೂರಿನಲ್ಲಿ ನನ್ನ ಮಗಳ ಮನೆ ಇದೆಯೆಂದು ಹೇಳಿದರು. ನಾನು 18–20 ವರ್ಷಗಳು ತಿರುಗಿ

ನೋಡಿರಲಿಲ್ಲ. ಅವರು ಅಲ್ಲಿಗೆ ನಾನು ಒಂದು ವಾರ ಬಂದು ಇರುತ್ತೇನೆ. ನೀವು ಇಲ್ಲಿಗೆ ಬನ್ನಿಯೆಂದು ಹೇಳಿದರು. ಇಲ್ಲಿ ಸರ್ವಜ್ಞರ ಪ್ರತಿಮೆ ಪ್ರತಿಷ್ಠಾಪನೆಯಾಗಲಿ, ಈ ರೀತಿಯಾದರೂ ಸಂಬಂಧಗಳು ಬೆಳೆಯಲಿ, ನಾವೆಲ್ಲರೂ ಒಟ್ಟಾಗಿ ಇರೋಣವೆಂದು ಹೇಳಿದರು. ಇವತ್ತು ಗೋವಾದ ಮುಖ್ಯಮಂತ್ರಿಯವರು ಅವರ ಕಡೆಯಿಂದ ಪ್ರತಿನಿಧಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಕಡೆಯಿಂದ ಗೋವಾಕ್ಕೆ ಮರಳನ್ನು ಕಳುಹಿಸಿ ಕೊಡಬೇಕೆಂದು ಕೇಳಿದರು. ನಮ್ಮ ಕಾರವಾರ ಬಾರ್ಡರ್‌ನಿಂದ ನಮ್ಮ ಎಂ.ಎಲ್.ಎ.ಗಳು ಮತ್ತು ಮಂತ್ರಿಗಳು ಈ ಬಗ್ಗೆ ಮಾತನಾಡಲು ನನ್ನ ಹತ್ತಿರ ಬಂದರು. ಈ ವಿಷಯವಾಗಿ ಮಾನ್ಯ ವಿಶ್ವೇಶ್ವರ ಹೆಗಡೆಯವರು ಅವರನ್ನೆಲ್ಲ ನನ್ನ ಬಳಿ ಕರೆದುಕೊಂಡು ಬಂದಾಗ ನನಗೆ ಏನು ಅನಿಸಿತೆಂದರೆ, ನಾವು ಮರಳು ಕೋಡೋಣ, ಅದರೆ ಅವರಲ್ಲಿ ವ್ಯರ್ಥವಾಗಿ ಸಮುದ್ರಕ್ಕೆ ಹೋಗುವ ನೀರನ್ನು ನಮಗೆ ಕುಡಿಯುವುದಕ್ಕೆ ಕೊಡಲು ಏಕೆ ಅವರು ಯೋಚನೆ ಮಾಡುವುದಿಲ್ಲ?

ಶ್ರೀ ಟಿ.ಬಿ. ಜಯಚಂದ್ರ : ಅವರು ಅದನ್ನು ಒಪ್ಪುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಜಯಚಂದ್ರರವರೆ, ಇಲ್ಲಿ ನಾನು ಅವರನ್ನು ದೂಷಿಸುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಾವು ಮತ್ತು ತಮಿಳುನಾಡಿನವರು ಬಡಿದಾಡುತ್ತಿದ್ದೇವೆ. ಅದು ಏಕೆಂದರೆ ರಾಜಕಾರಣ, ಇಂಥ ಸೂಕ್ಷ್ಮವಾದ ವಿಷಯಗಳು ಏನು ಇವೆ. ಅಲ್ಲಿ ಅಭಿವೃದ್ಧಿ ಆಗದಿದ್ದರೂ ಪರವಾಗಿಲ್ಲ, ಗಟ್ಟಿಯಾಗಿ ನಾನು ನೀರನ್ನು ಬಿಟ್ಟುಕೊಡುವುದಿಲ್ಲವೆಂದರೆ ಮಾತ್ರ ಜನ ಓಟನ್ನು ಕೊಡುವುದೆಂಬ ಭ್ರಮೆ ಇದೆ. ಈ ರೀತಿಯ ಚಿಂತನೆ ಏನು ಇದೆ, ಅದಕ್ಕೆ ನಾನು ಒಂದು ಮಾತನ್ನು ಹೇಳಿದೆ. ನಾನು ಇದನ್ನು ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಶಾಸಕರ ಸಮಕ್ಷಮದಲ್ಲಿ ಹೇಳಲಿಚ್ಛಿಸುತ್ತೇನೆ. ಇವತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಇಲ್ಲ. ಅವರೊಡನೆ ನಾನು ಮಾತನಾಡಿದ್ದೆ. ನಾನು ಆಂಧ್ರಪ್ರದೇಶಕ್ಕೆ ಬರುತ್ತೇನೆಂದು ಹೇಳಿದ್ದೆ. ನಾನು ತಮಿಳುನಾಡಿನ ಮುಖ್ಯಮಂತ್ರಿಯವರ ಮಗ ಸ್ಟ್ಯಾಲಿನ್ ಹತ್ತಿರವೂ ಮಾತನಾಡಿದ್ದೇನೆ. ನಾವು ಒಂದು ಬಾರಿ across the table ಕುಳಿತು ಕೊಳ್ಳೋಣ. ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದಕ್ಕೆ ಏತಕ್ಕೋಸ್ಕರ ಸಾಧ್ಯವಾಗುವುದಿಲ್ಲ? ಈ ರೀತಿಯಾಗಿ ಕೇಂದ್ರ ಸರ್ಕಾರಕ್ಕೂ ಮುಜುಗರ ವಾಗುವಂಥಾದ್ದನ್ನು ತಪ್ಪಿಸಿ, ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ಕಡೆ ಪ್ರಯತ್ನ ಮಾಡದೇ ಇದ್ದರೆ ತೊಂದರೆಯಾಗುತ್ತದೆ.

ನಮ್ಮ ರೈತರಲ್ಲಿ ಸರಾಸರಿ ಹಿಡುವಳಿ ನಾಲ್ಕು ಎಕರೆ ಇದೆ. ನಾಲ್ಕು ಎಕರೆಗಿಂತ ಕಡಿಮೆ ಹಿಡುವಳಿ ಇರುವಂಥ ಒಬ್ಬ ಸಣ್ಣ ರೈತ ಮತ್ತು ಕೃಷಿ ಕಾರ್ಮಿಕ, ಬಡತನ ರೇಖೆಗಿಂತ ಕೆಳಗಿರುವಂಥ ವ್ಯಕ್ತಿಗೆ ಶಕ್ತಿಯನ್ನು ತುಂಬಿ ಅವನು ಸ್ವಾವಲಂಬಿಯಾಗಿ ಬದುಕುವುದಕ್ಕೆ ಸಕಾಲದಲ್ಲಿ ಉತ್ತಮವಾದ ಬಿತ್ತನೆಯ ಬೀಜ, ಸಕಾಲಕ್ಕೆ ರಸಗೊಬ್ಬರ, ಸಕಾಲಕ್ಕೆ ಅವನಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವಂಥಾದ್ದು, ಇದನ್ನು ಈ ವರ್ಷ ಮಾಡಿದ್ದೇವೆ. ಇದರಿಂದ ಸ್ವಲ್ಪವಾದರೂ ಸಮಾಧಾನವಾಗುವಂಥಾದ್ದು ಆಗಿದೆ. ನಾನು ಅಧಿಕಾರಕ್ಕೆ ಬಂದ ತಕ್ಷಣ ಇವರು ಬಿತ್ತನೆ ಮಾಡುವ ಸಮಯದಲ್ಲಿ ರಸಗೊಬ್ಬರದ ಸಮಸ್ಯೆ ಆಯಿತು. ಆಗ ಎಲ್ಲರೂ ಇವರು ಬಂದಮೇಲೆ ಗೋಲಿಬಾರ್ ಆಯಿತೆಂದು ಮಾತನಾಡಿದರು. ಹೌದು, ಆ ಸಮಯದಲ್ಲಿ ರಸಗೊಬ್ಬರ ಸಿಗಲಿಲ್ಲವೆಂದು ಪೈಪೋಟಿ, ಗಲಾಟೆಗಳು ಆಯಿತು. ಆದರೆ ಇದರಿಂದ ತೃಪ್ತಿ ಪಟ್ಟುಕೊಳ್ಳಬೇಕಾ? ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಗೋಲಿಬಾರ್ ಆಯಿತೆಂದು ಹೇಳುವುದು, ರೈತನ ಮಗ ಎನ್ನುವುದು ಏನಾಯಿತೆಂದು ಹೇಳುವುದಕ್ಕಿಂತ, ಏಕೆ ಈ ಸಮಸ್ಯೆ ಆಯಿತು, ಸಕಾಲಕ್ಕೆ ಅವನಿಗೆ ರಸಗೊಬ್ಬರವನ್ನು ಒದಗಿಸಲು ಏಕೆ ಆಗುವುದಿಲ್ಲವೆಂದು ಯೋಚನೆ ಮಾಡಬೇಕು. ಅವನು ದುಡ್ಡು ಕೊಡಲು ಸಿದ್ದನಿದ್ದಾನೆ. ನಮಗೆ ಅವನ ಮನೆ ಬಾಗಿಲಿಗೆ ಅಗತ್ಯವಿರುವ ರಸಗೊಬ್ಬರವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ, ಅವನ ಹೊಲಕ್ಕೆ ನೀರು ಕೊಡುವುದಕ್ಕೆ ಆಗಲಿಲ್ಲ, ಉತ್ತಮವಾದ ಬಿತ್ತನೆ ಬೀಜ ಕೊಡುವಂಥಾದ್ದು. ನಾವು ಮತ್ತು ಮಾನ್ಯ ಜಯಚಂದ್ರರವರು hybrid ಬಿತ್ತನೆ ಬೀಜವನ್ನು ತಂದು ಬಿತ್ತಿದ್ದೇವೆ. ಆದರೆ ಅದು ಬೆಳೆಯಲೇ ಇಲ್ಲ. ಇದರಿಂದ ರೈತನ ಪರಿಸ್ಥಿತಿ ಏನಾಗಬೇಕು, ಅದರಲ್ಲೂ ಕಳಪೆ ಮಟ್ಟದ್ದು, ಕಲಬೆರಕೆ ಯಾಗಿರುವಂಥಾದ್ದು, ಔಷಧಿಯಲ್ಲಿ ಕಲಬೆರಕೆ ಮಾಡುವಂಥವರು ಯಾರು ಇದ್ದಾರೆ. ಅಂಥವರನ್ನು ಹಿಡಿದು ಜೈಲಿಗೆ ಹಾಕದೇ ಇದ್ದರೆ, ಇವರ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ, ರೈತರು ಬದುಕುವುದು ಹೇಗೆ? ಅವನು ಮುಂದೆ ಬರುವುದು ಹೇಗೆ? ಇದರ ಬಗ್ಗೆ ನಿಮ್ಮ ಸಲಹೆಯನ್ನು ಕೊಡಬೇಕು. ನಾನು ಕೃಷಿಕರಿಗೆ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಕುರಿ ಸಾಕಾಣಿಕೆ, ಕೈ ತೋಟ ಮಾಡುವಂಥದ್ದು, ಹಣ್ಣು ಹಂಪಲುಗಳನ್ನು ಬೆಳೆಯುವಂಥಾದ್ದು, ಈ ಕಡೆಗೆ ನಾವು ವಿಶೇಷವಾದಂಥ ಗಮನವನ್ನು ಕೊಡಬೇಕೆಂದು ನನಗನಿಸುತ್ತದೆ. ನಾನು ತಮ್ಮಲ್ಲಿ ವಿನಮ್ರತೆಯಿಂದ ಒಂದು ಮಾತನ್ನು ಹೇಳುವುದೇನೆಂದರೆ

ಕೇಂದ್ರ ಸರ್ಕಾರ ಅಪೇಕ್ಷೆಯಂತೆ ಮೊನ್ನೆ ದಿವಸ ಚೈನಾ ದೇಶಕ್ಕೆ ಹೋಗಿದ್ದೆ. ಆ ದೇಶ ಹೇಗೆ ಪ್ರಗತಿಯಾಗಿದೆಯೆಂಬ ಬಗ್ಗೆ ಚರ್ಚೆ ಮಾಡಿ ಹೇಳುವ ಅಗತ್ಯವಿಲ್ಲ, ಏಕೆಂದರೆ ಬಹಳ ಸದಸ್ಯರು ನನಗಿಂತ ಅನುಭವಿಗಳು ನಾಲ್ಕಾರು ಬಾರಿ ಹೋಗಿ ಬಂದಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ : ತಾವು ಚೈನಾ ದೇಶದ ಅನುಭವವನ್ನು ಹೇಳುತ್ತಿದ್ದೀರಿ. ಈಗ ಹೈನುಗಾರಿಕೆಯ ಬಗ್ಗೆ ಮಾತನಾಡುವಾಗ ಚೈನಾ ದೇಶವನ್ನು ನೆನಪು ಮಾಡಿಕೊಂಡಿದ್ದೀರಿ. ಅಲ್ಲಿ ಹೋಗಿ ಬಂದ ಮೇಲೆ ಏನಾದರೂ ಬದಲಾಗಿದೆಯಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಜಯಚಂದ್ರರವರೆ, ಖಂಡಿತವಾಗಿ ಆಗಿದೆ. ಅಲ್ಲಿ ರೈತರು ಬೆಳೆದಿರುವ ಭತ್ತವನ್ನು ನಿಂತು ನೋಡಿದರೆ ಒಂದೇ ಮಟ್ಟಕ್ಕೆ ಬೆಳೆದಿದ್ದಾರೆ. ಅಲ್ಲಿ ಕಾಲುವೆಗಳನ್ನು ನೀರು ಹರಿಯುವುದಕ್ಕೆಂದು ಮಾಡಿದ್ದಾರೆ. ಅಲ್ಲಿ ಒಂದು ಹನಿ ನೀರು ವ್ಯರ್ಥವಾಗುವ ಹಾಗಿಲ್ಲ. ಅಲ್ಲಿ ಕೃಷಿ ಅಲ್ಲದೇ ಹೈನುಗಾರಿಕೆ ಕೆಲಸ ಮೀನುಗಳನ್ನು ಸಾಕುವಂಥಾದ್ದು, ಕುರಿ, ಕೋಳಿ, ಸಾಕುವಂಥಾದ್ದು ಇದೆ. ನಾವು ಅಲ್ಲಿ ಹಣ್ಣು ಹಂಪಲುಗಳನ್ನು ತೆಗೆದುಕೊಳ್ಳಲು ನಿಂತಿದ್ದೆವು. ಮಾನ್ಯ ಶಿವಕುಮಾರ್‌ರವರೆ, ತಾವು ನೋಡಿದ್ದೀರಿ, ನೀವು ನೋಡಿರುವಷ್ಟು ನಾನು ನೋಡಿಲ್ಲ. ಅಲ್ಲಿ 90, 95 ವರ್ಷಗಳಾಗಿರುವ ಅಜ್ಜ, ಅಜ್ಜಿಗಳೊಂದಿಗೆ ಕುಳಿತು ಮಾತನಾಡಲು ಹೋದರೆ ಅವರೇ ಕುರ್ಚಿಗಳನ್ನು ತಂದು ಇಟ್ಟರು. ಅವರಿಗೆ 95 ವರ್ಷವೆಂದು ಹೇಳಿದರು. ಅವರು ಆರೋಗ್ಯವಂತರಾಗಿದ್ದಾರೆ, ಗಟ್ಟಿ ಇದ್ದಾರೆ, ಕೆಲಸ ಮಾಡುತ್ತಾರೆ. ಅಲ್ಲಿ ಮಲಗಿದವರನ್ನು ಒಬ್ಬರನ್ನೂ ನಾನು ನೋಡಲಿಲ್ಲ. ನಾವು ಸುಮಾರು 3–4 ಗಂಟೆಗಳ ಕಾಲ ಓಡಾಡಿ ಬಂದಾಗ ಅಲ್ಲಿ ಎಲ್ಲೂ ಬೀಡಿ, ಸಿಗರೇಟ್ ಸೇದುತ್ತಾ ಕುಳಿತಿರುವವರನ್ನು ಒಬ್ಬರನ್ನು ನೋಡಲಿಲ್ಲ. ನಮ್ಮಲ್ಲಿ ಒಂದು ಸ್ವಲ್ಪ ಅನುಕೂಲ ಮಾಡಿಕೊಟ್ಟರೆ ಅವರು ಹೊಲಕ್ಕೆ ಹೋಗುವುದನ್ನೇ ಬಿಟ್ಟು ಬಿಡುತ್ತಾರೆ. ಅವರ ಹೆಂಡತಿ, ಮಕ್ಕಳು ದುಡಿಯುವುದಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ. ಇವರನ್ನು ಜಾಗೃತರನ್ನಾಗಿ ಮಾಡುವುದು ಯಾವಾಗ? ಅಂದರೆ ನಾವು ಇಲ್ಲಿ ಸಣ್ಣ ಸಣ್ಣ ಸಂಗತಿಗಳ ಬಗ್ಗೆ ಚಿಂತನೆ ಮಾಡಬೇಕು. ಈಗ ಕೂಲಿಗಾಗಿ ಕಾಳು ಯೋಜನೆ ಇದೆ, ಕನಿಷ್ಟ ಕೂಲಿ ನೂರು ರೂಪಾಯಿಗಳ ಇದೆ. ಇಲ್ಲಿ ಗಂಡ ಹೆಂಡತಿ ದುಡಿದರೆ 200 ರೂಪಾಯಿಗಳಾಯಿತು. ಅಂದರೆ ತಿಂಗಳಿಗೆ ಸುಮಾರು 6,000 ರೂಪಾಯಿಗಳಾಗುತ್ತದೆ. ಅವರು ನೆಮ್ಮದಿಯಿಂದ ಬದುಕಿ ಕೆಲಸ

ಮಾಡುವುದರ ಕಡೆಗೆ ನೋಡಬೇಕಾಗುತ್ತದೆ. ಚೈನಾದಲ್ಲಿ ಮಾವ್ ಷೂ ವಿಲಾ ಎಂದು ಒಂದು ಊರು ಇದೆ. ಅಲ್ಲಿ ಉಚ್‌ಪಿಂಗ್ ಮತ್ತು ಪಿಂಕ್‌ಚುಯಿಂಗ್ ಎಂಬ ಗಂಡ ಹೆಂಡತಿಯವರೊಡನೆ ಸುಮಾರು ಅರ್ಧ ಗಂಟೆ ಕಾಲ ಮಾತನಾಡಿದೆವು. ಅವರಲ್ಲಿ ಎಷ್ಟು ಸಮಾಧಾನ, ತೃಪ್ತಿ, ಆ ವಯಸ್ಸಿನಲ್ಲಿ ಎಷ್ಟು ಅನಂದ. ಆ ಕೃಷಿಕನಲ್ಲಿ ಉತ್ಸಾಹವಿತ್ತು. ನಾನು ಅವನಲ್ಲಿ ಬೇಸರ ಇರುವಂಥಾದ್ದನ್ನು ಗಮನಿಸಲಿಲ್ಲ. ನಾವು ಕೂಡ ಏಕೆ ಗ್ರಾಮೀಣ ಜನರನ್ನು graduate ಮಾಡಿಸುವಂಥಾದ್ದು ಅಥವಾ diplima holder ಮಾಡಿಸಿ ಶಿಕ್ಷಣವಂತರನ್ನಾಗಿ ನೂರಕ್ಕೆ ಐವತ್ತು ಜನರನ್ನು ಮಾಡುವುದಕ್ಕೆ ನಮ್ಮ ಕೈಯಲ್ಲಿ ಏಕೆ ಆಗುತ್ತಿಲ್ಲ. ನನಗೆ ಅನಿಸುವುದೇನೆಂದರೆ ಎಲ್ಲೋ ಒಂದು ಕಡೆ ಈ ರೀತಿ ಯುವಕರನ್ನು, ಯುವತಿಯರನ್ನು ಕೂರಿಸಿ ಅಕ್ಷರ ಜ್ಞಾನಕ್ಕೋಸ್ಕರ 30 ದಿವಸಗಳು ಕಲಿಕಾ ಕೇಂದ್ರಕ್ಕೆ ಬಂದು ಕಲಿಯಬೇಕೆಂದು ಕಾನೂನನ್ನು ಮಾಡುವುದಕ್ಕೆ ತಾವುಗಳು ಒಪ್ಪಿಗೆಯನ್ನು ಕೊಟ್ಟರೆ ನಾನು ಈಗಾಲೇ ಈ ಬಗ್ಗೆ ಈಗಲೇ ತೀರ್ಮಾನವನ್ನು ತೆಗೆದುಕೊಳ್ಳಲು ಸಿದ್ಧನಿದ್ದೇನೆ. ನಾವು ಅವರನ್ನು ಸೋಮಾರಿಗಳನ್ನಾಗಿ ಮಾಡುವುದು ಬೇಡ. ನಾವು ಈ ರೀತಿಯಾಗಿ ಏನಾದರೂ ಒಂದು ನಿರ್ದಿಷ್ಟವಾದಂಥ ಕ್ರಮಗಳನ್ನು ಮಾಡಬೇಕಾಗಿದೆ. ಹಳ್ಳಿಗಳಲ್ಲಿ ನಿಮ್ಮ ಮಕ್ಕಳು ಇಲ್ಲ ನಮ್ಮ ಮಕ್ಕಳು ಇಲ್ಲ. ಮಾನ್ಯ ಜಯಚಂದ್ರರವರೆ, ಅವರು ಮಾತ್ರ ಇರಬೇಕೆಂದು ನಾವು ಹೇಗೆ ನಿರೀಕ್ಷೆ ಮಾಡುವುದಕ್ಕೆ ಸಾಧ್ಯ? ಇಲ್ಲಿ ನಗರದಲ್ಲಿರುವವರು ವಾಪಸ್ಸು ಹಳ್ಳಿಗಳಿಗೆ ಹೋಗಿ ನೆಲಸುವುದಕ್ಕೆ ಬೇಕಾದಂಥ ಮೂಲಭೂತ ಸವಲತ್ತುಗಳನ್ನು ಅಂದರೆ ಒಳ್ಳೆಯ ಶಾಲೆ, ಒಳ್ಳೆಯ ಆಸ್ಪತ್ರೆ, ರಸ್ತೆಗಳು, ಶೌಚಾಲಯಗಳು ಇವುಗಳನ್ನು ಅಭಿವೃದ್ಧಿ ಪಡಿಸುವಂಥಾದ್ದರ ಬಗ್ಗೆ ನಮ್ಮ ಎಲ್ಲಾ ಶಾಸಕರು ಒಟ್ಟಾಗಿ ಚಿಂತನೆ ಮಾಡಬೇಕು. ಇನ್ನು ಆಹಾರ ಸಂಸ್ಕರಣೆ ಮತ್ತು ಜವಳಿ ಆಧಾರಿತ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿ ಅಲ್ಲಿನ ಯುವ ಜನತೆಗೆ ತರಬೇತಿಯನ್ನು ಕೊಡುವಂಥಾದ್ದು ಆಗಬೇಕು. ಎಲ್ಲಾ ಗ್ರಾಮೀಣ ಜನರಿಗೆ ಉತ್ತಮವಾದಂಥ ಆರೋಗ್ಯ ಸೇವೆ ಸಿಗುವಂಥದ್ದು ಆಗಬೇಕು. ಮಕ್ಕಳಿಗೆ ಉತ್ತಮವಾದಂಥ ಪೌಷ್ಟಿಕ ಆಹಾರ ಸಿಗುವಂಥದ್ದರ ಬಗ್ಗೆ ಚಿಂತನೆ ಆಗಬೇಕು. ಈಗ ನಾವು ಹೊಸ ಕಲ್ಪನೆಯನ್ನು ಮಾಡಿಕೊಂಡು ಒಂದೊಂದು ಗ್ರಾಮಕ್ಕೂ ಒಂದೊಂದು ಕೋಟಿ ರೂಪಾಯಿಗಳನ್ನು ಒಂದೊಂದು ಇಲಾಖೆಯಲ್ಲಿ ಖರ್ಚು ಮಾಡುತ್ತಿದ್ದೇವೆ. ಅದರಿಂದ ಏಳೆಂಟು ವರ್ಷಗಳಲ್ಲಿ ಚರಂಡಿ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಮನೆಗಳನ್ನು ಮಾಡುವಂಥಾದ್ದು,

ಸಮೀಪದಲ್ಲೇ ಶುದ್ಧವಾದಂಥ ನೀರು ಸಿಗುವಂಥಾದ್ದು, ಊರಿಗೊಂದು ವನ ಮಾಡುವಂಥಾದ್ದು, ಊರಿಗೊಂದು ಕೆರೆ ಮಾಡುವಂಥದ್ದು.

ಈಗ ನಾವೇನು ಒಂದು ಹೊಸ ಕಲ್ಪನೆಯನ್ನು ಮಾಡಿಕೊಂಡು ಒಂದೊಂದು ಗ್ರಾಮಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನೇನು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ಗ್ರಾಮಗಳಲ್ಲಿ ಇನ್ನು ಏಳೆಂಟು ವರ್ಷಗಳಲ್ಲಿ ಒಳ್ಳೆಯ ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಮನೆಗಳನ್ನು ಮಾಡುವಂಥಾದ್ದು, ಸಮೀಪದಲ್ಲೇ ಶುದ್ಧವಾದ ನೀರು ಸಿಗುವಂಥ ವ್ಯವಸ್ಥೆ ಮಾಡುವಂಥಾದ್ದು, ಊರಿಗೊಂದು ವನ ಮಾಡುವಂಥಾದ್ದು, ಊರಿಗೊಂದು ಕೆರೆಯನ್ನು ಮಾಡುವಂಥಾದ್ದು ಆಗಬೇಕು. ನಾನು ಬೆಳಗಾವಿ ಜಿಲ್ಲೆಗೆ ಹೋದಾಗ ಅಲ್ಲಿಯ ಶಾಸಕರಾದ ಅಭಯ ಪಾಟೀಲ್‌ರವರು ನಮ್ಮನ್ನು ಕರೆದುಕೊಂಡು ಹೋಗಿ ಒಂದು ಕೆರೆಯನ್ನು ತೋರಿಸಿದ್ದರು. ಅಲ್ಲಿ ಊರಿನ ಮಧ್ಯೆ ಕೆರೆಯನ್ನು ಮಾಡಿದ್ದಾರೆ. ಒಂದು ಕಾರ್ಯಕ್ರಮಕ್ಕೆ ಅಲ್ಲಿಗೆ ಹೋಗಿದ್ದಾಗ ನಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದರು. ಇಡೀ ಊರ ಜನ ಸಾಯಂಕಾಲ ಆ ಕೆರೆಯ ಸುತ್ತ ಓಡಾಡುತ್ತಾರೆ, ಅಲ್ಲಿ ರಸ್ತೆಗಳ ಅಭಿವೃದ್ಧಿಯಾಗಿದೆ, widening ಅವರೇ ಮಾಡಿಕೊಂಡಿದ್ದಾರೆ. ಇದನ್ನು ನೋಡಿದ ಮೇಲೆ ನನಗೇನನ್ನಿಸಿತು ಎಂದರೆ, ಅದರ ಬಗ್ಗೆ ಒಂದು ಸಲ ನಾನು ಪ್ರತಿಪಕ್ಷದ ನಾಯಕರ ಜೊತೆ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ನಮ್ಮಲ್ಲಿ ಧರ್ಮಸ್ಥಳದ ಹೆಗ್ಗಡೆಯವರಿಂದ ಹಿಡಿದು ಸೇವಾ ಸಂಸ್ಥೆಗಳು ಬಹಳಷ್ಟಿವೆ. ಗ್ರಾಮೋದ್ಯೋಗದ ಬಗ್ಗೆ ಅವರು ಏನೇನು ಮಾಡುತ್ತಾರೆ ಎನ್ನುವುದು ನಮಗೆ ಗೊತ್ತಿದೆ. ನಾವು ಗ್ರಾಮೀಣಾಭಿವೃದ್ಧಿಗೆ ಖರ್ಚು ಮಾಡುತ್ತಿರುವ ಹಣದಲ್ಲಿ ಒಂದು lump sum ಹಣವನ್ನು ತೆಗೆದು ಅಂಥವರಿಗೆ ಕೊಟ್ಟು, ಅದಕ್ಕೆ ನೀವೊಂದಷ್ಟು ಹಣವನ್ನು ಹಾಕಿ, ಏನೇನು develop ಮಾಡುತ್ತೀರೋ ಮಾಡಿ ಎಂದು ಹೇಳಿ, ನಮ್ಮ ಸರ್ಕಾರಿ ನೌಕರರು ಸ್ವಲ್ಪ rest ತೆಗೆದುಕೊಳ್ಳಿ ಎಂದು ಹೇಳಿದರೆ ಒಳ್ಳೆಯದೇನೋ. ಇಲ್ಲದಿದ್ದರೆ ಇವರು supervision ಮಾಡಿಲಿ ಸಾಕು. ಈ ರೀತಿ ಆಗದಿದ್ದರೆ, ನಾವು ಎಷ್ಟೇ ಹಣವನ್ನು ಖರ್ಚು ಮಾಡಿದರೂ ಸಹ ಕಳಪೆ ಕಾಮಗಾರಿ ಆಗುವುದನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಇವತ್ತು ತಾವು ಸಲಹೆಗಳನ್ನು ಕೊಡಬೇಕು. ನೀವು ಏನು ಸಲಹೆಗಳನ್ನು ಕೊಟ್ಟು, ಒಮ್ಮತದಿಂದ ಒಪ್ಪಿಕೊಳ್ಳುತ್ತೀರೋ ಅದನ್ನು ಜಾರಿಗೆ ಕೊಡುವುದಕ್ಕೆ

ನಾನಂತೂ ಸಿದ್ಧನಿದ್ದೇನೆ. ಈ ಬಗ್ಗೆ ನಾವು ಒಟ್ಟಾಗಿ ಕುಳಿತು ಭಾರತೀಯ ವಿಚಾರಗಳ ಬಗ್ಗೆ ಚರ್ಚೆ ಮಾಡಿ, ಚಿಂತನೆ ಮಾಡಿ, ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯದಿದ್ದರೆ ಬೇರೆ ಯಾವುದೇ ರೀತಿಯ ಪರಿಹಾರ ಸಿಗುವುದು ಸಾಧ್ಯವಿಲ್ಲ. ಇವತ್ತೀಚೆಗಂತೂ ಹಳ್ಳಿಗಳಲ್ಲಿ ಕೂಲಿ ಮಾಡುವ ಜನರು ಮಾತ್ರ ಇದ್ದಾರೆ. ಬುದ್ಧಿವಂತರು ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಬರುತ್ತಿದ್ದಾರೆ. ಚೈನಾದಲ್ಲಿ ನಾನು ಕಂಡದ್ದನ್ನು ಹೇಳುತ್ತಿದ್ದೇನೆ. ಅಲ್ಲಿ ಒಂದು ಕುಟುಂಬಕ್ಕೆ ಇಬ್ಬರು ಮಕ್ಕಳಿಗಿಂತ ಜಾಸ್ತಿ ಮಕ್ಕಳಿಲ್ಲ. ಅಥವಾ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಮಾಡಿಕೊಂಡರೆ ನಾವು facilities ಕೊಡುವುದಿಲ್ಲ ಎಂದು ಮಾಡಿದ್ದಾರೆ. ಇದನ್ನು ಹಳಬರಿಗೆ ಅನ್ವಯಿಸುವುದು ಬೇಡ. ಇವತ್ತಿನಿಂದ, ಒಂದು ಕುಟುಂಬದಲ್ಲಿ ಎರಡು ಮಕ್ಕಳಿಗಿಂತ ಜಾಸ್ತಿ ಮಕ್ಕಳಿದ್ದರೆ ನಾವು ಯಾವುದೇ ಸರ್ಕಾರಿ ಸವಲತ್ತುಗಳನ್ನು ಕೊಡುವುದಿಲ್ಲ, ಅದು ನಿನ್ನ ಹಣೆಬರಹ ಎಂದು ಹೇಳಿ, ಹೀಗೇನಾದರೂ ಜನಸಂಖ್ಯೆಯನ್ನು ನಿಯಂತ್ರಣ ಮಾಡುವ ಕಡೆ ನಾವು ಗಮನವನ್ನು ಕೊಡದೇ ಹೋದರೆ ಜನಸಂಖ್ಯೆಯನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಚೇನಾ ದೇಶದವರು population ಅನ್ನು ಹತೋಟಿಗೆ ತರಲು ವಿಶ್ವಪ್ರಯತ್ನವನ್ನು ಮಾಡುತ್ತಿದ್ದಾರೆ, ಹತೋಟಿಗೆ ತರುತ್ತಿದ್ದಾರೆ. ಆದರೆ ನಾವು ನಿಷ್ಪೂರವಾಗಿದ್ದೇವೆ, ಚುನಾವಣೆಗಳು ನಮ್ಮ ಕಣ್ಣ ಮುಂದೆ ಇರುತ್ತವೆ. ಇದರಿಂದ ನಾವು ಹೊರಬಂದರೆ ಅಭಿವೃದ್ಧಿಯ ಕಡೆ ಗಮನವನ್ನು ಕೊಡುವುದಕ್ಕೆ ಸಾಧ್ಯವಿದೆ. ಹಳ್ಳಿಗಳ ಗುಂಪುಗಳನ್ನು ಗುರುತಿಸಿ, ಅಲ್ಲಿನ ವಾಣಿಜ್ಯ, ವ್ಯವಹಾರ, ಉದ್ಯೋಗ ಬಹುಪಾಲು ಸ್ವಾವಲಂಬಿಯಾಗುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಯೋಚನೆ ಮಾಡುವಂಥಾದ್ದು ಆಗಬೇಕು. ನಾನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಒಂದು ವಿಶೇಷ ಲೇಖನವನ್ನು ಬರೆದು ಅದಕ್ಕೆ ಸಾರ್ವಜನಿಕರು ತಮ್ಮ ಅಭಿಪ್ರಾಯನವನ್ನು ಕೊಡಬೇಕು ಎಂದು ಕೇಳಿದ್ದೇನೆ. ಇದರಲ್ಲಿ ದೊಂಬರಾಟವೇನೂ ಇಲ್ಲ. ಶಾಸನಸಭೆ ನಮ್ಮ ಸಾರ್ವಭೌಮ ಅಧಿಕಾರ, ಚುನಾಯಿತ ಪ್ರತಿನಿಧಿಗಳಾಗಿ ನಾವು ಇಲ್ಲಿದ್ದೇವೆ. ಇಲ್ಲಿ ಒಳಗಡೆ ಬಂದು ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಆಗದೇ ಇರುವಂಥವರು ಅದನ್ನು ಹೊರಗಡೆಯಿಂದ ಕೊಟ್ಟರೆ, ಇಲ್ಲಿರುವಂಥ ನಾವು ಅದನ್ನು ಚರ್ಚೆ ಮಾಡಿ, ಅನುಷ್ಠಾನಗೊಳಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಈ ಕರೆಯನ್ನು ಕೊಟ್ಟಿದ್ದೇನೆಯೇ ಹೊರತು ಇದರಲ್ಲಿ ಬೇರೆ ಯಾವ ಕಾರಣವೂ ಇರಲಿಲ್ಲ. ನಿಮಗೆ ಆಶ್ಚರ್ಯ

ವಾಗಬಹುದು, ಸಾವಿರಾರು ಪತ್ರಗಳು, ಟೆಲಿಗ್ರಾಂ ಮೂಲಕ ಮಾಹಿತಿಗಳನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ನೋಡಿದಾಗ, ಗ್ರಾಮೀಣಾಭಿವೃದ್ಧಿ ಬಗ್ಗೆ ಇಷ್ಟೊಂದು ಆಸಕ್ತಿ ವಿದ್ಯಾವಂತರಿಗಿದೆಯೆಲ್ಲ ಎಂದು ಆಶ್ಚರ್ಯವಾಗುತ್ತದೆ. ನಾನು ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತಿನ ವ್ಯವಸ್ಥೆಯನ್ನು ಸುಧಾರಣೆ ಮಾಡಲು ನಮಗೆ ಧಾರ್ಮಿಕ, ಸಾಮಾಜಿಕ ಸಂಘಟನೆಗಳ ಮಾರ್ಗದರ್ಶನದ ಒಂದು ಸಹಭಾಗಿತ್ವ ಇವತ್ತು ಅವಶ್ಯಕವಿದೆ. ಅಲ್ಲಿಯ ಪರಿಸರ, ಅಲ್ಲಿಯ ವೈಶಿಷ್ಟ್ಯಗಳಿಗನುಗುಣವಾಗಿ ಆರ್ಥಿಕ ಚಟುವಟಿಕೆಗಳನ್ನು ತರುವುದಕ್ಕೆ ಏನಾದರೂ ಪ್ರಯತ್ನವನ್ನು ಮಾಡಬೇಕಾಗಿದೆ. ಅಲ್ಲಿಯ ಕೌಶಲ್ಯವನ್ನು ಅಭಿವೃದ್ಧಿಗೊಳಿಸಿ, ಅಲ್ಲಿ ತಯಾರಾದಂಥ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಪ್ರಯತ್ನ ಆಗಬೇಕಾಗಿದೆ. ಕೊನೆಯದಾಗಿ ನಿಮ್ಮಲ್ಲಿ ಒಂದೇ ಪ್ರಾರ್ಥನೆ, ಈ ಅಧಿವೇಶನದ ಕೊನೆಯಲ್ಲಿ ಹತ್ತು ಹಲವು ಉಪಯುಕ್ತ ಯೋಜನೆಗಳು, ವಿಚಾರಗಳು ಸಲಹೆಗಳನ್ನು ನೀವು ಕೊಡಬೇಕು. ಹೆಚ್ಚು ಜನ ಶಾಸಕರು ಈ ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನುವುದಷ್ಟೇ ನಿಮ್ಮಲ್ಲಿ ನನ್ನ ವಿನಮ್ರ ಪ್ರಾರ್ಥನೆ. ನೀವು ಸಲಹೆ ಕೊಡಿ, ಚರ್ಚೆ ಮಾಡೋಣ. ಪ್ರತಿಪಕ್ಷದ ನಾಯಕರು ಜೊತೆ ಕುಳಿತು ನಾನು ಚರ್ಚೆ ಮಾಡುತ್ತೇನೆ, ನಾವು ಈಗೇನು ಮಾಡಬಹುದು, ಮುಂದೆ ಬಜೆಟ್ ಅನ್ನು ಮಂಡನೆ ಮಾಡಬೇಕಾದರೆ ಯಾವಯಾವ ಬಾಬನ್ನು ಕಡಿಮೆ ಮಾಡಬೇಕೆಂದು ನೀವೆಲ್ಲ ಹೇಳುತ್ತೀರೋ ಅದನ್ನು ಮಾಡೋಣ, ಎಲ್ಲರೂ ಒಟ್ಟಾಗಿ ಕುಳಿತುಕೊಳ್ಳೋಣ. ನಾನು ಮುಖ್ಯಮಂತ್ರಿಯಾಗಿ ಇಲ್ಲಿ ಕುಳಿತಾಕ್ಷಣ, ಕೆಲವು ಅಧಿಕಾರಿಗಳು ಸಲಹೆ ಕೇಳಿ ಬಜೆಟ್ ಸಿದ್ಧತೆ ಮಾಡಬೇಕೆಂದೇನೂ ಇಲ್ಲ, ಅದರ ಬದಲು, ಯಾವುದಕ್ಕೆ ಆದ್ಯತೆ ಕೊಡಬೇಕು, ಯಾವುದಕ್ಕೆ ಬೇಡ ಎನ್ನುವ ಬಗ್ಗೆ ನಿಮ್ಮ ಸಲಹೆಗಳನ್ನು ಕೊಡಿ. ಗ್ರಾಮೀಣಾಭಿವೃದ್ಧಿ ಬಗ್ಗೆ ಇಷ್ಟು ಚರ್ಚೆಯಾಯಿತು, ಯಡಿಯೂರಪ್ಪನವರೇ ನೀವು ಏನು ಮಾಡಿದಿರಿ ಎಂದು ನಾಳೆ ಸಿದ್ದರಾಮಯ್ಯನವರು ಅಥವಾ ಜಯಚಂದ್ರರವರು ಎದ್ದು ಕೇಳಬಾರದು. ಏನು ಮಾಡಬೇಕು ಎನ್ನುವ ಬಗ್ಗೆ ನೀವು ನನಗೆ ಸಲಹೆಗಳನ್ನು ಕೊಡಿ. ನಾನು ಶಿರಬಾಗಿ ಅವುಗಳನ್ನು ತೆಗೆದುಕೊಂಡು, ತಕ್ಷಣಕ್ಕೆ ಏನು ಮಾಡಬಹುದು, ಮುಂದೆ ಏನು ಮಾಡಬಹುದೋ ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಮುಂದಿನ ವರ್ಷದ ಆಯವ್ಯಯದಲ್ಲೂ ಅದನ್ನು ಸೇರಿಸಲಿಕ್ಕೆ ನಾನು ಸಿದ್ಧನಿದ್ದೇನೆ. ಆ ರೀತಿ ಅರ್ಥಪೂರ್ಣವಾದಂಥ ಚರ್ಚೆಯ ಮೂಲಕ ಈ ಅಧಿವೇಶನವನ್ನು ಕರೆದಂಥ ಉದ್ದೇಶ

ಸಫಲವಾಗಬೇಕು. ಸಮೃದ್ಧ ಕರ್ನಾಟಕದ ಕಲ್ಪನೆ ಸಾಕಾರವಾಗಬೇಕು. ಈ ಅಧಿವೇಶನವನ್ನು ಕರೆಯುವುದಕ್ಕೆ ಸಹಕಾರ ಕೊಟ್ಟು, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ನಿಮಗೆ ಮತ್ತು ಎಲ್ಲಾ ಶಾಸಕ ಮಿತ್ರರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನಾದರೂ ಪ್ರತಿಪಕ್ಷ, ಆಡಳಿತ ಪಕ್ಷ ಎನ್ನುವಂಥ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತೋಣ. ಚುನಾವಣಾ ಸಮಯದಲ್ಲಿ ಪಕ್ಷ ಎಂದು ಹೇಳಿ ಬಡಿದಾಡೋಣ. ಈ ರಾಜ್ಯದ ಜನರ ಅಭಿವೃದ್ಧಿಯ ದೃಷ್ಟಿಯಿಂದ ನಾನಂತೂ ನನ್ನಲ್ಲಿರುವ ಕೊರತೆಗಳನ್ನು ತಿದ್ದಿಕೊಳ್ಳಲು ಸಿದ್ಧನಿದ್ದೇನೆ. ದಯಮಾಡಿ ಆ ರೀತಿಯ ಸಲಹೆ ಕೊಡಿ. ಆ ಸಲಹೆಗಳ ಆಧಾರದ ಮೇಲೆ supplementary budget ನಲ್ಲಿ ಏನು ಸೇರಿಸಬೇಕೋ, ಮುಂದಿನ ಬಜೆಟ್‌ನಲ್ಲಿ ಏನು ಮಾಡಬೇಕೋ ಮಾಡೋಣ. ಆದರೆ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಹಣಕಾಸಿನ ಇತಿಮಿತಿಯಲ್ಲಿ ಏನು ಮಾಡಬಹುದು ಎನ್ನುವಂಥ ಸಲಹೆಗಳನ್ನು ನೀವೆಲ್ಲ ಕೊಡಬಹುದು ಎಂದು ವಿನಂತಿ ಮಾಡಿ ಈ ಚರ್ಚೆಗೆ ಅವಕಾಶ ಮಾಡಿಕೊಟ್ಟಂಥ ಎಲ್ಲ ಸದಸ್ಯರಿಗೆ ವಂದಿಸುತ್ತೇನೆ. ಕೊನೆಯಲ್ಲಿ ಅಂದರೆ ನೀವೆಲ್ಲ ನಿಮ್ಮ ಅಭಿಪ್ರಾಯಗಳನ್ನು ಕೊಟ್ಟ ಮೇಲೆ ನಾವು ಏನು ಮಾಡಿದ್ದೇವೆ, ಮುಂದೆ ಏನು ಮಾಡಬೇಕು ಎಂದು ಉತ್ತರ ಕೊಡುವಂಥ ಕಾಲದಲ್ಲಿ ನಾನು ಅಥವಾ ಸಂಬಂಧಪಟ್ಟ ಸಚಿವರು ಹೇಳುತ್ತೇವೆ. ನಾನು ಎಲ್ಲೂ, ಯಾವುದೇ ರಾಜಕೀಯ ಬೆರೆಸಲು ಹೋಗಲಿಲ್ಲ, ನಾನು ಯಾರ ಕಡೆಗೂ ಬೆರಳು ಮಾಡಿ ತೋರಿಸಲು ಹೋಗಲಿಲ್ಲ. ಏಕೆಂದರೆ ಒಂದು ಬೆರಳು ಮಾಡಿ ತೋರಿಸಿದರೆ, ಉಳಿದ ನಾಲ್ಕು ಬೆರಳು ನನ್ನ ಕಡೆ ನೋಡುತ್ತಿರುತ್ತವೆ. ಇವತ್ತಿರುವ ಎಲ್ಲ ಕೊರತೆಗಳನ್ನು ಸರಿಪಡಿಸಿ ಸುಧಾರಣೆ ಮಾಡಿ ಯಡಿಯೂರಪ್ಪನವರೇ ಎನ್ನುವ ಜನರ ಆಶೀರ್ವಾದದಿಂದ ಇಲ್ಲಿ ಕುಳಿತಿದ್ದೇನೆ. ನನಗೆ ಈಗ ಜ್ಞಾನೋದಯವಾಗಿದೆ. ಬುದ್ಧನಿಗೆ ಜ್ಞಾನೋದಯವಾದ ಹಾಗೆ ಯಡಿಯೂರಪ್ಪನವರಿಗೆ ಚೀನಾ ದೇಶಕ್ಕೆ ಹೋದ ಮೇಲೆ ಜ್ಞಾನೋದಯ ವಾಗಿರಬಹುದು ಎಂದು ಕುಮಾರಸ್ವಾಮಿಯವರು ಹೇಳಿದರು. ನನಗೆ ನಿಜಕ್ಕೂ ಚೈನಾ ದೇಶಕ್ಕೆ ಹೋಗಿ ಬಂದ ಮೇಲೆ ಜ್ಞಾನೋದಯವಾಗಿದೆ. ನಮ್ಮ ಕರ್ತವ್ಯದ ಅರಿವಾಗಿದೆ. ಇನ್ನೂ ಹೆಚ್ಚು ಗಮನ ಕೊಡಬೇಕು ಎನ್ನುವ ಜಾಗೃತಿ ಮೂಡಿದೆ, ನಮಗೆ ನಿಮ್ಮ ಸಲಹೆ, ಸಹಕಾರ ಬೇಕು ಎಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ, ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬೇಕಲ್ಲವೇ?

ಅಧ್ಯಕ್ಷರು : ಮಧ್ಯಾಹ್ನ ಊಟವಾದ ಮೇಲೆ ನೀವು ಮಾತನಾಡಿ. ಈಗ ಎಲ್ಲರೂ ಊಟಕ್ಕಾಗಿ ಎದ್ದಿದ್ದಾರೆ. ನೀವು ಮಧ್ಯಾಹ್ನ ಮಾತನಾಡಿ.

ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2.28 ಗಂಟೆಗೆ ಮುಕ್ತಾಯಗೊಂಡು ಪುನಃ 3.30 ಗಂಟೆಗೆ ಸೇರಲು ತೀರ್ಮಾನಿಸಿತು)

ಸದನವು ಪುನಃ ಮಧ್ಯಾಹ್ನ 3.47 ಗಂಟೆಗೆ ಸಮಾವೇಶಗೊಂಡಿತು ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.

8. ಪ್ರಕಟಣೆ :

ವಿಷಯ : ಶ್ರೀ ಪಂಕಜ್ ಅಡ್ವಾಣಿ, ಬಿಲಿಯಡ್ಸ್ ಚಾಂಪಿಯನ್ ಅವರಿಂದ ಅಭಿನಂದನಾ ಪ್ರಸ್ತಾವ :

ಮಾನ್ಯ ಸಭಾಧ್ಯಕ್ಷರು : ಭಾರತದ ಅಗ್ರ ಶ್ರೇಯಾಂಕದ ಬಿಲಿಯರ್ಡ್ಸ್ ಆಟಗಾರ ಶ್ರೀ ಪಂಕಜ್ ಅಡ್ವಾಣಿಯವರು, 9 ಬಾರಿ ವೃತ್ತಿಪರ ಬಿಲಿಯರ್ಡ್ಸ್ ಚಾಂಪಿಯನ್ ಆಗಿರುವ ಶ್ರೀ ಮೈಕ್‌ರಸಲ್ ಅವರನ್ನು ಸೋಲಿಸುವ ಮೂಲಕ ವಿಶ್ವ ವೃತ್ತಿಪರ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಗೆದ್ದ ಎರಡನೇ ಭಾರತೀಯ ಆಟಗಾರನೆಂದು ಕ್ರೀಡಾ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದ್ದಾರೆ. ಶ್ರೀ ಪಂಕಜ್ ಅಡ್ವಾಣಿಯವರು ಕನ್ನಡಿಗರಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿರುತ್ತದೆ. ಈ ಐತಿಹಾಸಿಕ ಸಾಧನೆಗಾಗಿ ಯುವ ಆಟಗಾರನಾದ ಶ್ರೀ ಪಂಕಜ್ ಅಡ್ವಾಣಿಯವರಿಗೆ ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತದೆ.

ಅದೇ ರೀತಿ 2007 ರಲ್ಲಿ ಏಕಕಾಲಕ್ಕೆ ನಿರ್ಮಾಣವಾದ ಭಾರತೀಯ ಚಲನಚಿತ್ರಗಳಿಗೆ 55ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಾದ ಅತ್ಯುತ್ತಮ ನಟ ಹಾಗೂ ಅತ್ಯುತ್ತಮ ನಟಿ ಪ್ರಶಸ್ತಿಗೆ ಕನ್ನಡಿಗರಾದ ಶ್ರೀ ಪ್ರಕಾಶ್ ರೈ ಹಾಗೂ ಶ್ರೀಮತಿ ಉಮಾಶ್ರೀ ಅವರು ಆಯ್ಕೆಯಾಗಿರುವುದು ಕನ್ನಡ ನಾಡಿಗೆ ಹೆಮ್ಮೆಯ ವಿಷಯವಾಗಿದೆ.